ಅಧ್ಯಕ್ಷರು: ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1 ಗಂಟೆ 18 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ಮಧ್ಯಾಹ್ನ 3.00 ಗಂಟೆಗೆ ಸೇರಲು ನಿಶ್ಚಯಿಸತು)

ಸದನವು ಮಧ್ಯಾಹ್ನ 11.17 ಗಂಟೆಗೆ ಪ್ರಾರಂಭವಾಯಿತು.

(ಸನ್ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

6. ಸಭೆಯ ಮುಂದಿಡಲಾದ ಕಾಗದ ಪತ್ರಗಳು:

ವಿಷಯ. ಆಸರೆ ಯೋಜನೆಯ ವಸ್ತು ನಿಷ್ಠೆ ಪ್ರಗತಿಯ ವರದಿ ಹಾಗೂ ಸರ್ಕಾರದ ಎರಡು ವರ್ಷಗಳ ಸಾಧನೆ ಬಗ್ಗೆ.–

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು): ಎರಡು ವಿಷಯಗಳನ್ನು ಸದನದಲ್ಲಿ ಪ್ರಸ್ತಾಪ ಮಾಡಲಿಕ್ಕೆ ಇಚ್ಛಿಸುತ್ತೇನೆ. ಉತ್ತರ ಕರ್ನಾಟಕದಲ್ಲಿ ಹಿಂದಿನ ವರ್ಷ ಬಂದ ಅನಿರೀಕ್ಷಿತ ಮಳೆಯಿಂದ ಬಹಳಷ್ಟು ಪ್ರಮಾಣದಲ್ಲಿ ಜನರ ಪ್ರಾಣ, ಆಸ್ತಿಗಳ ನಷ್ಟವಾಗಿ ಜನರ ಬದುಕು ಸಂಕಷ್ಟದಲ್ಲಿ ಸಿಲುಕಿತ್ತು. ಈ ಬಗ್ಗೆ ಸರ್ಕಾರ ಸಮರೋಪಾದಿಯಲ್ಲಿ ನೆರೆಪೀಡಿತರಿಗೆ ಅನೇಕ ರೀತಿಯಲ್ಲಿ ಪರಿಹಾರ ಕ್ರಮಗಳನ್ನು ಕೈಗೊಂಡಿರುತ್ತಾರೆ. ಈಗ ಆಸರೆ ಯೋಜನೆಯನ್ನು ಸಿದ್ಧಪಡಿಸಿ ಎಲ್ಲಾ ರೀತಿಯ ನೆರವಿನ ಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ಬಗ್ಗೆ ಆಸರೆ ಯೋಜನೆಯ ವಸ್ತುನಿಷ್ಠ ಪ್ರಗತಿಯ ವರದಿ ಹಾಗು ಸರ್ಕಾರದ ಎರಡು ವರ್ಷಗಳ ಸಾಧನೆ ಎಂಬ ಎರಡು ಪುಸ್ತಕಗಳನ್ನು ಸದನದ ಮುಂದೆ ಮಂಡಿಸಲಿಕ್ಕೆ ನಾನು ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

ಈಗ ನಿಯಮ 69 ರ ಮೇರೆಗೆ ಇರುವ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ಪ್ರಾರಂಭ ಮಾಡಿ.

6. ನಿಯಮ 69ರ ಮೇಲೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿಯ ಮುಂದುವರೆದ ಚರ್ಚೆ:

ವಿಷಯ: ಸನ್ಮಾನ್ಯ ಲೋಕಾಯುಕ್ತರು ಭ್ರಷ್ಟಾಚಾರ ತಡೆಯುವ ನಿಟ್ಟಿನಲ್ಲಿ ಕಠಿಣ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಹಲವು ವರದಿಗಳನ್ನು ಸಲ್ಲಿಸಿದ್ದಾರೆ. ರಾಜ್ಯದ ನೈಸರ್ಗಿಕ, ಜನತೆಯ ಹಾಗೂ ಗಣಿ ಸಂಪತ್ತು ಅಕ್ರಮವಾಗಿ ಲೂಟಿಯಾಗುತ್ತಿದೆ. ನೆರೆ ಸಂತ್ರಸ್ತರಿಗೆ ಪರಿಹಾರ ನೀಡುವಲ್ಲಿ ಆಗಿರುವ ಅವ್ಯವಹಾರ ಮತ್ತು ತಾರತಮ್ಯದ ಬಗ್ಗೆ ತನಿಖೆ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಭ್ರಷ್ಟಾಚಾರ ತಡೆಯಲು ಸರ್ಕಾರದಿಂದ ಸಹಕಾರ ಸಿಗುತ್ತಿಲ್ಲವೆಂದು ನೊಂದು ಸನ್ಮಾನ್ಯ ಲೋಕಾಯುಕ್ತರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಬಗ್ಗೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು): ನ್ಯಾಯಮೂರ್ತಿ ಶ್ರೀ. ಎನ್. ಸಂತೋಷ್ ಹೆಗ್ಡೆಯವರು ಈ ರಾಜ್ಯದ ಲೋಕಾಯುಕ್ತರು ಈ ತಿಂಗಳ 23 ರಂದು ರಾಜೀನಾಮೆಯನ್ನು ಕೊಟ್ಟಿದ್ದಾರೆ. ಬಹುಶ: ದೇಶದ ಇತಿಹಾಸದಲ್ಲಿ ರಾಜ್ಯದಲ್ಲಿರತಕ್ಕಂಥ ಲೋಕಾಯುಕ್ತರು ಮನ ನೊಂದು, ಸರ್ಕಾರ ಅಸಹಕಾರ ಮಾಡಿದೆ ಎಂದು ರಾಜೀನಾಮೆಯನ್ನು ಕೊಟ್ಟಿದ್ದಾರೆ. ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡತಕ್ಕಂಥ ಅವರ ಕಾರ್ಯಾಚರಣೆ ಏನಿದೆ ಅದನ್ನು ಯಾವ ಬದ್ಧತೆಯಿಂದ ಅವರು ಹೋರಾಟ ಮಾಡುತ್ತಿದ್ದರು, ಅದಕ್ಕೆ ಬೇಕಾದಂಥ ಸಹಕಾರವನ್ನು ಸರ್ಕಾರ ಕೊಟ್ಟಿಲ್ಲ. ಅನೇಕ ಸಂದರ್ಭಗಳಲ್ಲಿ ಅಧಿಕಾರಿಗಳ ಭ್ರಷ್ಟಾಚಾರ ಪತ್ತೆ ಹಚ್ಚಿ ದಾಳಿ ಮಾಡಿ ಅವರ ಮೇಲೆ ಕ್ರಮ ತೆಗೆದುಕೊಂಡು ಅವರನ್ನು ಅಮಾನತ್ತಿಗೊಳಪಡಿಸಿದಂಥ ಅಧಿಕಾರಿಗಳನ್ನು ಕೂಡ ಲೋಕಾಯುಕ್ತರ ಗಮನಕ್ಕೂ ತಂದಿಲ್ಲ. ಅಷ್ಟೇ ಅಲ್ಲ, ಲೋಕಾಯುಕ್ತರು suspend ಮಾಡಿದವರನ್ನು reinstate ಮಾಡಿರುವ ಬಗ್ಗೆಯೂ ಲೋಕಾಯುಕ್ತರ ಗಮನಕ್ಕೂ ತಂದಿಲ್ಲ. ಅದರ ಜೊತೆಗೆ ಮೊದಲು ಅವರು ಯಾವ ಜಾಗದಲ್ಲಿದ್ದರು ಅಲ್ಲಿ ಅವರ ಮೇಲೆ ದಾಳಿ ಮಾಡಿ ಅವರು red hand ಆಗಿ ಭ್ರಷ್ಟಾಚಾರ ಮಾಡುವಾಗ ಅವರು ಸಿಕ್ಕಿಬಿದ್ದಿದ್ದರು ಅನೇಕ ಸಂದರ್ಭಗಳಲ್ಲಿ ಅದೇ ಜಾಗಕ್ಕೆ ಅವರನ್ನು ಮತ್ತೆ ನಿಯುಕ್ತಿಗೊಳಿಸಿರುವಂಥ ಅನೇಕ ನಿದರ್ಶನಗಳಿವೆ. ಅದರ ಜೊತೆಗೆ ಕಳೆದ ನವೆಂಬರ್ ತಿಂಗಳಲ್ಲಿ

ಉಪಲೋಕಾಯುಕ್ತರ ಅವಧಿ ಮುಗಿದು ನವೆಂಬರ್‌ನಿಂದ ಇವತ್ತಿನವರೆಗೆ ಆ ಹುದ್ದೆ ಭರ್ತಿಯಾಗಿಲ್ಲ. ಲೋಕಾಯುಕ್ತರು ತನಿಖೆ ಮಾಡಬೇಕಾದ ಸುಮಾರು ಎಂಟು ಸಾವಿರ, ಒಂಭತ್ತು ಸಾವಿರ ಮೊಕದ್ದಮೆಗಳು ಪೆಂಡಿಂಗ್ ಇವೆ. ಆ ಮೊಕದ್ದಮೆಗಳು ಇನ್ನೂ ಹೆಚ್ಚಾಗುತ್ತಲೇ ಹೋಗುತ್ತಿವೆ, ಲೋಕಾಯುಕ್ತರೊಬ್ಬರೇ ಅಷ್ಟೊಂದು ಭಾರದ ಮತ್ತು ಜವಾಬ್ದಾರಿಯ ಕೆಲಸಗಳನ್ನು ಮಾಡುವುದಕ್ಕೆ ಕಷ್ಟವಾಗುತ್ತದೆ, ಉಪ ಲೋಕಾಯುಕ್ತರನ್ನು ನೇಮಕ ಮಾಡಿಕೊಡಿ ಎಂದು ಮನವಿ ಮಾಡಿದರೂ ಕೂಡ ಸರ್ಕಾರ ಅದನ್ನು ಗಂಭೀರವಾಗಿ ಪರಿಗಣಿಸಿಲ್ಲ. ಇದನ್ನು ನಾನು ಹೇಳುವುದಲ್ಲ. ಲೋಕಾಯುಕ್ತರೇ ಹೇಳಿಕೊಂಡಿದ್ದಾರೆ. ಅದಕ್ಕೆ ಅವರು 23ನೇ ತಾರೀಖು ರಾಜ್ಯಪಾಲರಿಗೆ ಮನನೊಂದು, ಬೇಸತ್ತು ರಾಜೀನಾಮೆಯನ್ನು ಕೊಟ್ಟಿದ್ದೇನೆಂದು ಹೇಳುತ್ತಾರೆ. ರಾಜೀನಾಮೆ ಕೊಡಲಿಕ್ಕೆ ಕಾರಣಗಳನ್ನು ಕೊಡುವಾಗ ಅವರು ಎಲ್ಲಿಯೂ ಕೂಡ ತಮಗೆ ಪರಮಾಧಿಕಾರ ಕೊಡಲಿಲ್ಲ, ಆ ಪರಮಾಧಿಕಾರವನ್ನು ಕೊಡದಿದ್ದಕ್ಕಾಗಿ ರಾಜೀನಾಮೆಯನ್ನು ಕೊಟ್ಟಿದ್ದೇನೆಂದು ಎಲ್ಲಿಯೂ ಹೇಳಿಲ್ಲ. ಆದರ ಒಮ್ಮೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದೆ. ಆ ರೀತಿ ಭೇಟಿ ಮಾಡಿದಾಗ suo-motu ಅಧಿಕಾರ ಕೊಡಿ. ಬಹಳ ಪರಿಣಾಮಕಾರಿಯಾಗಿ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡಬೇಕಾದರೆ ಇನ್ನು ಹೆಚ್ಚು ಅಧಿಕಾರವನ್ನು ಕೊಡಿ ಎಂದು ಕೇಳಿದ್ದೇನೆಂಬ ಮಾತುಗಳನ್ನು ಹೇಳಿದ್ದಾರೆ. ಅದರ ಜೊತೆಗೆ ಮಾನ್ಯ ಅಧ್ಯಕ್ಷರೇ ಬಿ.ಜೆ.ಪಿ. ಸರ್ಕಾರ ಅವರ 2008 ರ manisfesto ನಲ್ಲಿ ಹೇಳಿದಂತೆ ಅವರು ಒಂದು ಮಾತನ್ನು ಈ ರಾಜ್ಯದ ಜನತೆಗೆ ಕೊಟ್ಟಿದ್ದಾರೆ. ಉತ್ತರ ಆಡಳಿತ ಕೊಡುತ್ತೇವೆ. ಉತ್ತಮ ಆಡಳಿತವನ್ನು ಕೊಡಲಿಕ್ಕೋಸ್ಕರ ಭ್ರಷ್ಟಾಚಾರವನ್ನು ತಡೆಗಟ್ಟಲಿಕ್ಕೋಸ್ಕರವಾಗಿ ಲೋಕಾಯುಕ್ತರನ್ನು ಹೆಚ್ಚು ಬಲಪಡಿಸುತ್ತೇವೆ. ಎಂದು ಅವರು ಹೇಳಿರುವುದು. ಲೋಕಾಯುಕ್ತರು ಸಹ ಅದನ್ನೇ ಹೇಳಿದ್ದಾರೆ, manifesto ನಲ್ಲಿ ಹೆಚ್ಚು ಅಧಿಕಾರವನ್ನು ಕೊಡುತ್ತೇವೆಂದು ಹೇಳಿದ್ದರು. ನಾನು ಲೋಕಾಯುಕ್ತನಾಗಿ ಸುಮಾರು ನಾಲ್ಕು ವರ್ಷಗಳಾಯಿತು, ನನ್ನ ಅವಧಿ ಸುಮಾರು 14 ತಿಂಗಳುಗಳಿಗಷ್ಟೇ ಉಳಿದಿರುವುದು. ಬಿಜೆಪಿ ಸರ್ಕಾರ ಬಂದು ಎರಡು

ವರ್ಷಗಳು ಮುಗಿದಿವೆ. ಎರಡು ವರ್ಷಗಳಾದರೂ ಕೂಡ ಲೋಕಾಯುಕ್ತರವನ್ನು ಏನು ಬಲಪಡಿಸುತ್ತೇವೆಂದು, ಭ್ರಷ್ಟಚಾರವನ್ನು ತಡೆಗಟ್ಟಲಿಕ್ಕೆ ಹೆಚ್ಚು ಶಕ್ತಿಯನ್ನು ಕೊಡುತ್ತೇವೆಂದು ಹೇಳಿದ್ದರು, ಆದರೆ ಎರಡು ವರ್ಷಗಳಾದರೂ ಆ ಹೆಚ್ಚಿನ ಅಧಿಕಾರವನ್ನು ಕೊಡಲಿಲ್ಲ ಎಂದು ಹೇಳಿದ್ದಾರೆ ಅಷ್ಟೆ. ಆದರೆ ಎರಡು ವರ್ಷಗಳಾದರೂ ಆ ಹೆಚ್ಚಿನ ಅಧಿಕಾರವನ್ನು ಕೊಡಲಿಲ್ಲ ಎಂದು ಹೇಳಿದ್ದರೆ ಅಷ್ಟೆ. ಆದರೆ ಪರಮಾಧಿಕಾರವನ್ನು ನನಗೆ ಕೊಡಲಿಲ್ಲವೆಂಬ ಕಾರಣಕ್ಕೆ ರಾಜೀನಾಮೆ ಕೊಟ್ಟಿದ್ದೇನೆಂದು ಅವರು ನೀಡಿರುವ ಕಾರಣಗಳಲ್ಲಿ, ಎಲ್ಲಿಯೂ ಹೇಳಿಲ್ಲ. ನಾನು ಅವರು 23ನೇ ತಾರೀಖು ಎಲ್ಲಾ ಮಾಧ್ಯಮಗಳಲ್ಲಿ ಎಲ್ಲಾ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಪತ್ರಿಕೆಗಳಲ್ಲಿ Electronic mediaದಲ್ಲಿ ಪ್ರಚಾರವಾಗಿದೆ, ಎಲ್ಲರೂ ಅದನ್ನು ನೋಡಿದ್ದಾರೆ, ಓದಿದ್ದಾರೆ. ಅವರು ಏನು ಹೇಳಿದ್ದಾರೆಂದರೆ ಬಹಳ ಮುಖ್ಯವಾಗಿ, ಸ್ಪಷ್ಟವಾಗಿ Deccan Herald Paperನಲ್ಲಿ ಬಂದಿದೆ. Total non co-operation by Government in fighting corruption. ಇದು ಒಂದು ಕಾರಣ. "Plea, for appointment of Upa Lokayukta ignored" it is another reason. "Officials trapped in corruption cases reinstated. Ceased Iron ore at Belekere port, Karwar was disappeared in Karwar, Belekere port. Honest Officers suspended. Lokayukta officials involved in various probes punished."I have suffered mentally". Lokayukta has said, he has suffered mentally. There are several instances to show, how the Government has ignored deliberately, over-ruled and shown indifference to the Lokayukta institution. "This is a slap not only on my face, on the institution also. When such being the case, Why should I continue" so these are the circumstances under which Mr.Lokayuktha has been pushed to by this Government to resign. ಅವರು ಇನ್ನು ಒಂದು ಹೆಜ್ಜೆ ಮುಂದಕ್ಕೆ ಹೋಗಿ

ಏನು ಹೇಳುತ್ತಾರೆ ಎಂದರೆ, ನಾನು ಏನೂ emotional ಆಗಿ ಈ ರಾಜೀನಾಮೆಯನ್ನು ಕೊಟ್ಟಿಲ್ಲ. ನಾನು ಕಳೆದ ಎರಡು-ಮೂರು ತಿಂಗಳುಗಳಿಂದ ಮಾನಸಿಕ ವೇದನೆಯನ್ನು ಅನುಭವಿಸಿ ತೊಳಲಾಟಕ್ಕೆ ಸಿಕ್ಕಿಹಾಕಿಕೊಂಡು ರಾಜೀನಾಮೆ ಕೊಟ್ಟಿದ್ದೇನೆ. ಅಂತಿಮವಾಗಿ ಬಂದರು ಮಂತ್ರಿಯವರಾದ ಮಾನ್ಯ ಕೃಷ್ಣ ಪಾಲೇಮಾರ್‌ರವರು ಒಂದು ಪತ್ರ ಬರೆಯುತ್ತಾರೆ. ಮಾನ್ಯ ಕೃಷ್ಣ ಪಾಲೇಮಾರ್‌ರವರು 10ನೇ ಜೂನ್ 2010ರಂದು ಒಂದು ಟಿಪ್ಪಣಿ ಅನ್ನು ಕಳುಹಿಸಿ ಕೊಟ್ಟಿದ್ದಾರೆ. ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಟಿಪ್ಪಣಿ ಕಳುಹಿಸಿಕೊಟ್ಟಿದ್ದಾರೆ. It is addressed to the Chief Secretary of Karnataka. ಇದರಲ್ಲಿ ಏನು ಹೇಳಿದ್ದಾರೆ ಎಂದರೆ, 08.06.2010ರಂದು ಪ್ರಜಾವಾಣಿ ಪತ್ರಿಕೆಯಲ್ಲಿ ಬೇಲೇಕೇರಿ ಬಂದರಿನಲ್ಲಿ ಅರಣ್ಯ ಇಲಾಖೆ ವಶಪಡಿಸಿಕೊಂಡಿದ್ದ ಕಬ್ಬಿಣದ ಅದಿರು ಕಳವಾಗಿರುವುದಾಗಿ ಪ್ರಕರಣವಾಗಿರುತ್ತದೆ ಎಂದು ಮಿನಿಸ್ಟರ್‌ರವರು ಹೇಳಿರುವುದು ಇದು. "ದಿನಾಂಕ 08.06.2010ರಂದು ಕಾರವಾರ ಪ್ರವಾಸದಲ್ಲಿದ್ದಾಗ ಅರಣ್ಯಾಧಿಕಾರಿಗಳು ವಶಪಡಿಸಿಕೊಂಡಿದ್ದ 200 ಕೋಟಿ ರೂಪಾಯಿಗಳ ಮೌಲ್ಯದ ಆರು ಲಕ್ಷ ಮೆಟ್ರಿಕ್ ಟನ್ ಅದಿರು ನಾಪತ್ತೆಯಾಗಿರುವ ಗಂಭೀರ ಪ್ರಕರಣಕ್ಕೆ ಸಂಬಂಧಿಸಿದಂತೆ ಚರ್ಚಿಸಿ ಮಾಹಿತಿ ಪಡೆಯಲು ಉಪ ಸಂರಕ್ಷಣಾಧಿಕಾರಿ ಶ್ರೀ ಗೋಕುಲ್, He is a DCF, Deputy Conservator of Forest, Mr.Gokkul, ಇವರನ್ನು ಕರೆದಾಗ ಸದರಿ ಅಧಿಕಾರಿ ಚರ್ಚೆಗೆ ಬಾರದೇ ಉದಾಸೀನ ವ್ಯಕ್ತಪಡಿಸಿರುತ್ತಾರೆ, ಇದರಿಂದ ಮೇಲ್ಕಂಡ ಪ್ರಕರಣದಲ್ಲಿ ಇವರೂ ಸಹ ಭಾಗಿಯಾಗಿರಬಹುದೆಂದೂ ಸಂಶಯ ವ್ಯಕ್ತವಾಗಿದೆ. ಆದುದರಿಂದ ಸದರಿ ಅಧಿಕಾರಿಯನ್ನು ಕೂಡಲೇ ವಿಚಾರಣೆ ಬಾಕಿ ಇಟ್ಟು ಅಮಾನತ್ತಿನಲ್ಲಿಡಲು ಕೋರಿದೆ ಹಾಗೂ ಕೈಗೊಂಡ ಕ್ರಮದ ಬಗ್ಗೆ ಕೂಡಲೇ ವಿವರವಾದ ವರದಿಯನ್ನು ಸಲ್ಲಿಸುವಂತೆ ಸೂಚಿಸಿದೆ". ಇದು ಅವರಿಗೆ ಬಹಳ ಹೆಚ್ಚು ನೋವು ಮಾಡಿರುವಂತಹ ಪತ್ರ. ಎರಡು-ಮೂರು ತಿಂಗಳುಗಳಿಂದ ರಾಜೀನಾಮೆ ಕೊಡಬೇಕೇ ಅಥವಾ ಬೇಡವೇ ಎಂದು ಅವರ ಮನಸ್ಸು ಉಯ್ಯಾಲೆಯಂತೆ ಓಡುತ್ತ ಇತ್ತು. ಅವರು ಹಾಗೂ ಅವರ

ಸಂಬಂಧಿಕರು ವಿಚಾರ ಮಾಡುತ್ತಿದ್ದರು. ಇಂತಹ ಸನ್ನಿವೇಶದಲ್ಲಿ ಬಿಟ್ಟು ಹೋಗಬೇಕೋ ಅಥವಾ ಬೇಡವೋ ಎಂದು ವಿಚಾರ ಮಾಡುತ್ತಿದ್ದರು. ಜನ ನಮ್ಮ ಮೇಲೆ ಬಹಳ ವಿಶ್ವಾಸ ಇಟ್ಟುಕೊಂಡಿದ್ದಾರೆ ಎಂದು ವಿಚಾರ ಮಾಡುತ್ತಿದ್ದರು. ಅಂತಹ ಸನ್ನಿವೇಶದಲ್ಲಿ ಮಾನ್ಯ ಮಂತ್ರಿಗಳು,, ಜೀವಶಾಸ್ತ್ರ, ಪರಿಸರ ಬಂದರು ಮತ್ತು ಒಳನಾಡು ಜಲಸಾರಿಗೆ ಇವರು ಒಂದು ಪತ್ರ ಬರೆಯತ್ತಾರೆ. ಈ ತರಹದ ಪತ್ರ ಬರೆಯುತ್ತಾರೆ. ಇವರನ್ನು ಸಸ್ಪೆಂಡ್ ಮಾಡುವುದಕ್ಕೆ ಈ ಎಲ್ಲಾ ಪ್ರೋಸಸ್ ಶುರುವಾಗುತ್ತದೆ. ಈ ಅಧಿಕಾರಿಗಳು ಯಾರು ಎಂದರೆ, ಇವರು ಯು.ವಿ.ಸಿಂಗ್ ಮತ್ತು ಹಿತ್ತಲಮಕ್ಕಿ ಇವರೆಲ್ಲರೂ ಕೂಡ ಬೇಲೇಕೇರಿ ಬಂದರಿನಲ್ಲಿ ರೈಡ್ ಮಾಡಿ ಎಂಟು ಲಕ್ಷಕ್ಕೂ ಹೆಚ್ಚಿನ ಅದಿರನ್ನು ಅಲ್ಲಿ ಪತ್ತೆ ಮಾಡುತ್ತಾರೆ. ಆ ಎಂಟು ಲಕ್ಕದೊಳಗಡೆ ಇವರು ಏನು ಹೇಳಿದ್ದಾರೆ ಆರು ಲಕ್ಷ ಮೆಟ್ರಿಕ್ ಟನ್ ಅದಿರು ಏನು ನಾಪತ್ತೆಯಾಗಿದೆ,, ಕಳುವಾಗಿದೆ ಎಂದು ಏನು ಮಿನಿಸ್ಟರ್ ಹೇಳಿದ್ದಾರೆ, ಅವರೂ ಭಾಗಿಗಳಾಗಿದ್ದಾರೆ. ಆದರೆ, ಇವರು ಭಾಗಿಗಳಾಗಿಲ್ಲ. ಕಂಡುಹಿಡಿದವರು ಇವರು. ಇವರು ಭಾಗಿಯಾಗಿರುವವರನ್ನು ಶಿಕ್ಕೆ ಮಾಡಿ ಎಂದರೆ, ಕಂಡುಹಿಡಿದವರನ್ನು ಶಿಕ್ಕೆ ಮಾಡುವುದಕ್ಕೆ ಹೊರಟಿದ್ದಾರೆ. "ಕಾರ್ಯಾಚರಣೆಯಲ್ಲಿ ನನ್ನ ಜೊತೆಯಲ್ಲಿ ಪ್ರಾಣದ ಹಂಗನ್ನು ತೊರದು ಸಹಕರಿಸಿದಂತಹ ವ್ಯಕ್ತಿಗಳಿಗೆ ನಾನು ಅವರಿಗೆ ರಕ್ಷಣೆ ಕೊಡುವುದಕ್ಕೆ ಆಗದಿದ್ದ ಮೇಲೆ Why should I continue in this office?" That is the reason why he has taken the decision to resign. ಅವರಿಗೆ ರಕ್ಷಣೆ ಕೊಡುವುದಕ್ಕೆ ಆಗಲಿಲ್ಲ. ನಾನು ಈ ಸ್ಥಾನದಲ್ಲಿ ಇದ್ದುಕೊಂಡು ಕಾರ್ಯಚರಣೆಯಲ್ಲಿ ಸಹಕರಿಸಿದಂತಹ ಅಧಿಕಾರಿಗಳಿಗೆ ಶಿಕ್ಷೆ ಆಗುವುದೇ ಆದರೆ, ಶಿಕ್ಷೆ ಆಗುವುದೇ ಯಾರು 5 ಲಕ್ಷ ಮೆಟ್ರಿಕ್ ಟನ್ ಅನ್ನು ಕದ್ದಿದ್ದಾರೆ ಅವರು ರಾಜಾರೋಷವಾಗಿ ತಿರುಗಾಡುವುದೇ ಆದರೆ ಶಿಕ್ಷೆ ಅಗುವುದೇ ಆದರೆ, ಈ ಸರ್ಕಾರದಲ್ಲಿ ಭ್ರಷ್ಟರಿಗೆ ಮಾತ್ರ ರಕ್ಷಣೆ ಇದೆಯೇ ಹೊರತು, ಪ್ರಾಮಾಣಿಕರಿಗೆ, ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುವಂತಹವರಿಗೆ ರಕ್ಷಣೆ ಇಲ್ಲ. ನಾನು ಇದರಲ್ಲಿ ಮುಂದುವರೆದು

ಪ್ರಯೋಜನವಿಲ್ಲವೆಂದು ನೊಂದು ರಾಜೀನಾಮೆ ಕೊಟ್ಟಿದ್ದಾರೆ. This is the reason why he hase taken the decision. ಇವರು ರಾಜೀನಾಮೆ ಕೊಟ್ಟಮೇಲೆ ಎಲ್ಲರೂ ನೋಡಿದ್ದೀರಿ. ಈ ರಾಜ್ಯದ ತುಂಬೆಲ್ಲಾ ಯಾವ ರೀತಿ ಪ್ರತಿಕ್ರಿಯೆ ಬಂದಿದೆ ಎಂದು ನೋಡಿದ್ದೀರಿ. ರಾಜ್ಯದ ತುಂಬಾ ಪ್ರತಿಕ್ರಿಯೇ ಬಂದಿದೆ. ರಾಜ್ಯವೆಂದರೆ ಎಲ್ಲಾ ಜಿಲ್ಲೆಗಳಲ್ಲಿಯೂ ಪ್ರತಿಕ್ರಿಯೆ ಬಂದಿದೆ. ರಾಜ್ಯದ ತುಂಬಾ irrespective of the political parties, Intellectuals, Writers, ಎಲ್ಲಾ ಪತ್ರಿಕೆಗಳು, Farmers, Advocates, even sitting Advocate General, Union Minister, Governor, the Senior most literary man like Mr.Patil Puttappa, he is 91 years old. ಅವರು ಹೇಳುತ್ತಾರೆ, ನೃಪತುಂಗನ ಕಾಲದಲ್ಲಿ ಲಭ್ಯವಿದ್ದ ನಮ್ಮ ರಾಜ್ಯ ದೊಡ್ಡ ಇತಿಹಾಸವಿರತಕ್ಕಂತಹ ರಾಜ್ಯ. ನೃಪತುಂಗ ಈ ರಾಜ್ಯವನ್ನು ಆಳಿದಂತಹವರು. ಅವರ ಮಗ ತಪ್ಪು ಮಾಡಿದ ಎಂದು ಅವರ ಮಗನಿಗೆ ಗಲ್ಲು ಶಿಕ್ಷೆ ಕೊಡುತ್ತಾರೆ. ಇಲ್ಲಿ ಮಾನ್ಯ ಯಡಿಯೂರಪ್ಪನವರ ಸರ್ಕಾರದಲ್ಲಿ ಭ್ರಷ್ಟರಿಗೆ ರಕ್ಷಣೆ ಕೊಡುತ್ತಿದ್ದಾರೆ ಎಂದು ಪಾಪ ಅವರು ನೊಂದುಕೊಂಡಿದ್ದಾರೆ. ಭ್ರಷ್ಟರಿಗೆ ರಕ್ಷಣೆ, ಶಿಷ್ಟರಿಗೆ ಶಿಕ್ಷೆ, ಪ್ರಾಮಾಣಿಕರಿಗೆ ಶಿಕ್ಷೆ. ಇದನ್ನು ನಾನು ಹೇಳಿರುವುದು ಅಲ್ಲ. It is the reaction of Mr. Patil Puttappa. ಅವರು ನೃಪತುಂಗನ ಬಗ್ಗೆ ಕಥೆ ಹೇಳಿದ್ದಾರೆ. ಇದನ್ನು ನಾನು ಪತ್ರಿಕೆಯಲ್ಲಿ ಓದಿದೆ. ಅವರು ಹೇಳಿರುವುದು ಈ ಪತ್ರಿಕೆಯಲ್ಲಿ ಓದಿದೆ. ಅವರು ಹೇಳಿರುವುದು ಈ ಪತ್ರಿಕೆಯಲ್ಲಿ ಇದೆ. ಹೀಗೆ ಎಲ್ಲಾ Senior Citizens of the State, Intellectuals, Advocates everybody, ಅಷ್ಟೇ ಅಲ್ಲಾ ಎಲ್ಲರೂ ಕೂಡ ಇಂತಹ ಸನ್ನಿವೇಶದಲ್ಲಿ ನೀವು ರಾಜೀನಾಮೆ ಕೊಡಬೇಡಿ ಎಂದು ಹೇಳಿದ್ದಾರೆ. ನೀವು ಮುಂದುವರೆಯಬೇಕು, ನಿಮ್ಮಿಂದ ಈ ರಾಜ್ಯದಲ್ಲಿ ಎನು ಒಳ್ಳೆಯದು ಆಗುತ್ತಿದೆ, ದಕ್ಷತೆಯಿಂದ ಪ್ರಾಮಾಣಿಕತೆಯಿಂದ ನೀವು ಏನು ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುತ್ತಿದ್ದಿರಿ, ಅದು ಮುಂದುವರಿಯಬೇಕು. ನಿಮ್ಮ ರಾಜೀನಾಮೆಯಿಂದ ಅದಕ್ಕೆ ಹಿನ್ನೆಡೆಯಾಗಬಾರದು. ನೀವು ಮುಂದುವರೆಯಿರಿ ಎಂದು ಹೇಳಿದ್ದಾರೆ.

ಇಂತಹ ಸನ್ನಿವೇಶದಲ್ಲಿ ನೀವು ರಾಜೀನಾಮೆ ಕೊಡಬೇಡಿ, ನೀವು ಮುಂದುವರಿಯಬೇಕು, ನಿಮ್ಮಿಂದ ಈ ರಾಜ್ಯದಲ್ಲಿ ಏನು ಒಳ್ಳೆಯದಾಗುತ್ತಿದೆ, ದಕ್ಷತೆಯಿಂದ ಪ್ರಾಮಾಣಿಕವಾಗಿ ಭ್ರಷ್ಟಾಚಾರದ ವಿರುದ್ಧ ಏನು ಹೋರಾಟ ಮಾಡುತ್ತಿದ್ದೀರಿ ಅದು ಮುಂದುವರಿಯಬೇಕು, ನಿಮ್ಮ ರಾಜೀನಾಮೆಯಿಂದ ಅದಕ್ಕೆ ಹಿನ್ನಡೆಯಾಗಬಾರದು. ನೀವು ಮುಂದುವರೆಯಿರಿ ಎಂದು ಹೆಚ್ಚು ಕಡಿಮೆ ಈ ನಾಡಿನಲ್ಲಿ ಎಲ್ಲಾ ಜನರು, even ruling party ಶಾಸಕರುಗಳು ಹೇಳಿದ್ದಾರೆ. ಮಾನ್ಯ ಅಶೋಕ್‌ರವರು ಹೇಳಿದ್ದಾರೆ, B.J.P Presidentರಾದ ಮಾನ್ಯ ಈಶ್ವರಪ್ಪನವರು ಹೇಳಿದ್ದಾರೆ, ಮಾನ್ಯ ಸುರೇಶ್‌ಕುಮಾರ್‌ರವರು, ಬಚ್ಚೇಗೌಡರು ಹೇಳಿದ್ದಾರೆ. ಅದರೆ ಈ ರಾಜ್ಯದ ಮುಖ್ಯಮಂತ್ರಿಗಳು ಮಾತ್ರ ಹೇಳಿಲ್ಲ. ಅವರ ಬಗ್ಗೆ ಬಹಳ ಗೌರವ ಇದೆ. ಅವರು ಪ್ರಾಮಾಣಿಕರು, ದಕ್ಷರು, ಕ್ರಾಂತಿಕಾರಕ ಬದಲಾವಣೆಗಳನ್ನು ತಂದಿದ್ದಾರೆ. ಆದರೆ ಲೋಕಾಯುಕ್ತರಿಗೆ ತಮ್ಮ ರಾಜೀನಾಮೆ ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳಿದರೆ ಅವರಿಗೆ ಮುಜುಗರವಾಗುತ್ತದೆಂದು ಕೇಳುವುದಿಲ್ಲ ಎಂದಿದ್ದಾರೆ. ಇದು ಪ್ರಾಮಾಣಿಕವಾಗಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆಂದು ನನಗೆ ಅನಿಸುವುದಿಲ್ಲ. ಅದು ವ್ಯಂಗ್ಯವಾಗಿ ಹೇಳಿದ್ದು, ವ್ಯಂಗ್ಯಭರಿತವಾದಂಥ ಮತು. It is unexpected. ಇದು ಹೀಗೆ ಆಗಬಾರದಿತ್ತು ಎನ್ನುವುದನ್ನಷ್ಟೇ ಹೇಳಿದ್ದಾರೆ. ಇದರ ಅರ್ಥ, ಇವರ ಈ ಎಲ್ಲಾ ಮಾತುಗಳನ್ನು ಕೇಳಿದರೆ ಏನನಿಸುತ್ತದೆಂದರೆ, ಇವರು ರಾಜ್ಯ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುತ್ತಿದ್ದಾರೆ, ರಾಜ್ಯದಲ್ಲಿ ನಡೆಯುತ್ತಿರತಕ್ಕಂಥ ಭ್ರಷ್ಟಾಚಾರವನ್ನು ಈ ರಾಜ್ಯದ ಜನರ ಮುಂದೆ ಇಡುತ್ತಿದ್ದಾರೆ. ಇವರು ರಾಜೀನಾಮೆ ಕೊಟ್ಟು ಹೋದರೆ ಸಾಕು ಎನ್ನುವ ಭಾವನೆ ಈ ಸರ್ಕಾರಕ್ಕೆ ಇದ್ದ ಹಾಗೆ ಇದೆ ಎಂದು ಅವರೇ ಹೇಳಿದ್ದಾರೆ, ನಾನು ಹೇಳಿರುವುದಲ್ಲ. Chief Minister, Mr.Yeddiyurappa says, the Government will not request Mr.Santhosh Hegade to reconsider his decision. This is the statement made by Sri Yeddiyurappa. I have high respect towards Mr.Hegde. I thank him for his service as

Lokayukta. ಆದರೆ The Government will not request Mr.Santhosh Hegde to reconsider his decision. ಇವೆಲ್ಲಾ ಇವೆ. ಅವರಿಗೆ thanks ಹೇಳುತ್ತೇವೆ ಎಂದು ಹೇಳಿ, ವಿದಾಯ ಹೇಳಿದರು.

ನಾವು ಪ್ರಜಾತಂತ್ರ ವ್ಯವಸ್ಥೆಯನ್ನು ಒಪ್ಪಿಕೊಂಡಿರುವಂಥವರು. ಎಲ್ಲಾ ಪ್ರಜಾತಂತ್ರ ವ್ಯವಸ್ಥೆಗಳಲ್ಲಿ parliamentary system of democracy ಬಹಳ ಅತ್ಯುತ್ತಮವಾದದ್ದು ಎನ್ನುವುದು ನಮ್ಮೆಲ್ಲರ ಅನುಭವ ಮತ್ತು ಅನಿಸಿಕೆ, ಇದಕ್ಕಿಂಥ ಶ್ರೇಷ್ಠವಾದದ್ದು ಯಾವುದೂ ಇಲ್ಲ. ದೇಶದಲ್ಲಿ ಏನೆಲ್ಲಾ ಕ್ಲಿಷ್ಟ ಪರಿಸ್ಥಿಗಳನ್ನು ನಾವು ನೋಡಿದ್ದೇವೆ. ಆದರೆ ಪ್ರಜಾಪ್ರಭುತ್ವ survive ಆಗಿದೆ. Parliamentary system of democracy survive ಆಗಿದೆ. ಯಡಿಯೂರಪ್ಪನವರು ಕೂಡ ಪದೇ ಪದೇ ಹೇಳುತ್ತಿರುತ್ತಾರೆ, 'ಈ ರಾಜ್ಯದ ಜನತೆ ನಮ್ಮ ಮಾಲೀಕರು, ಜನರೇ ಮಾಲೀಕರು' ಎಂದು. It is an accepted principle in democracy, basic principle under the democracy. ಮಾನ್ಯ ಲೋಕಾಯುಕ್ತ ಸಂತೋಷ್ ಹೆಗ್ಡೆಯವರು ರಾಜೀನಾಮೆ ಕೊಡಬಾರದಾಗಿತ್ತು, ಯಡಿಯೂರಪ್ಪನವರ ನೇತೃತ್ವದ ಸರ್ಕಾರ ರಾಜೀನಾಮೆ ಕೊಡುವ ರೀತಿಯಲ್ಲಿ ಮಾಡಿ ತಪ್ಪು ಮಾಡಿದೆ ಎಂದು ಜನರಿಗೆ ಆಕ್ರೋಶವಿದೆ, ಕೋಪ ಇದೆ. ಅದಕ್ಕೋಸ್ಕರವೇ ರಾಜ್ಯದ ತುಂಬೆಲ್ಲಾ ಚಳುವಳಿಗಳು ನಡೆಯುವುದು ಜನರೇ ನಮ್ಮ ಮಾಲೀಕರು ಎಂದು ಹೇಳತಕ್ಕಂಥವರು ನಾವು; ಜನರ ಈ ಆಕ್ರೋಶ, ಭಾವನೆಗಳನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಆಗಲಿಲ್ಲವೆಂದರೆ ನಾವು ಪ್ರಜಾಂತಂತ್ರದಲ್ಲಿ ಆಳಲಿಕ್ಕೆ ಲಾಯಕ್ಕಿಲ್ಲ ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. This is the basic thing we should understand. This is the sentiment of the people in the entire country form all sections, from all corners of the society. ಬಹುಶ: ಇವತ್ತು ಬಹಳ ಜನ ನಮ್ಮ ಕಡೆ ನೋಡುತ್ತಿದ್ದಾರೆ. ಏಕೆಂದರೆ, ಸಾರ್ವಜನಿಕರಿಗೆ ಎಷ್ಟೇ ಕೋಪ, ಆಕ್ರೋಶಗಳು ಇದ್ದರೂ ಕೂಡ ಅವರಿಗೆ

ಸಂವಿಧಾನಾತ್ಮಕವಾದ ವೇದಿಕೆ ಇಲ್ಲ. ನಾವು ಅವರ ಅಧಿಕಾರದಿಂದ ಏನು ಚುನಾಯಿತರಾಗಿ ಬಂದಿದ್ದೇವೆ, ನಮಗೆ ಈ ವೇದಿಕೆ ಇದೆ. ಪ್ರಜಾತಂತ್ರದ ವ್ಯವಸ್ಥೆಯಲ್ಲಿ ವಿಧಾನಸಭೆ ಹಾಗೂ Parliament ಇದೆ. ಚನಾಯಿತ ಪ್ರತಿನಿಧಿಗಳಾದ ನಾವು ಜನರ ಭಾವನೆಗಳನ್ನು ಪ್ರತಿನಿಧಿಸುವುದಕ್ಕೋಸ್ಕರವಾಗಿ ಇಲ್ಲಿ ಬರುತ್ತೇವೆ. ನಾವು ಇಲ್ಲಿ ಜನರ ಭಾವನೆಗಳು, ಜನರ ಅನಿಸಿಕೆಗಳು, ಜನರ ನೋವು–ನಲಿವುಗಳ ಬಗ್ಗೆ ಹೇಳುವುದಕ್ಕೋಸ್ಕರ ಜನರು ನಮ್ಮನ್ನು ವಿಧಾನಸಭೆಗೆ ಆರಿಸಿ ಕಳುಹಿಸಿದ್ದಾರೆ. ನಾವು ಗೌರವಿಸಿದಂಥ, ಪ್ರೀತಿದಂಥ ಲೋಕಾಯುಕ್ತರು ಇವತ್ತು ರಾಜೀನಾಮೆ ಕೊಟ್ಟಿದ್ದಾರೆ, ವಿಧಾನಸಭೆ ಏನು ಮಾಡುತ್ತಿದೆ? ವಿಧಾನಪರಿಷತ್ತು ಏನು ಮಾಡುತ್ತಿದೆ ಎಂದು ಜನರು ನಮ್ಮನ್ನು ನೋಡುತ್ತಿದ್ದಾರೆ. ಇದನ್ನು ನಾವೆಲ್ಲರೂ ಕೂಡ ಅರ್ಥ ಮಾಡಿಕೊಳ್ಳಬೇಕಾಗಿರುವಂಥದ್ದು. ಅಧಿಕಾರ ಬರುತ್ತದೆ, ಅಧಿಕಾರ ಹೋಗುತ್ತದೆ. ಅಧಿಕಾರ ಏನೂ ಶಾಶ್ವತ ಅಲ್ಲ. 'ರೈತರಿಗೆ ಒಂದು ಸೆಕೆಂಡ್ ನೋವಾದರೂ ಕೂಡ ನಾನು ಆ ಕುರ್ಚಿ ಮೇಲೆ ಕೂರುವುದಿಲ್ಲ' ಎಂದು ಮಾನ್ಯ ಯಡಿಯೂರಪ್ಪನವರು ಅನೇಕ ಬಾರಿ ಹೇಳುತ್ತಿರುತ್ತಾರೆ. ಮೋನ್ನೆ ಟಿ.ವಿಯಲ್ಲಿ ನೋಡಿರಬಹುದು, ಯಾರೋ ಡಿ.ವೈ.ಎಸ್.ಪಿರವರು ರೈತರಿಗೆ ಬೂಟ್‌ನಲ್ಲಿ ಹೊಡೆಯುತ್ತಿದ್ದರು, ಲಾಠಿ ಚಾರ್ಜ್ ಮಾಡುತ್ತಿದ್ದರು. ಕೃಷ್ಣ ಪಾಲೇಮಾರ್‌ರವರೇ, ನೀವು ಟಿ.ವಿಯಲ್ಲಿ ನೋಡಲಿಲ್ಲವೇ? ಅದು ಒಂದು ನಿಮಿಷವಲ್ಲ ಬಹಳ ಹೊತ್ತು ಹೊಡೆಯುತ್ತಾರೆ, ಹೆಣ್ಣು ಮಕ್ಕಳನ್ನು ಎಳೆದಾಡುತ್ತಾರೆ, ಕೈ ಕೋಳ ಹಾಕುತ್ತಾರೆ, arrest ಮಾಡಿ ಜೈಲಿಗೆ ಹಾಕುತ್ತಾರೆ. ಜೈಲಿಗೆ ಹೋಗಬೇಕು, ಇದೇನಾ ಜನರು ಬಯಸುವುದು? ಇದೇನಾ ಮಾಲೀಕರು ಬಯಸುವುದು? ನಿಮ್ಮ ಪಕ್ಷಕ್ಕೆ ಇವತ್ತು majority ಇದ್ದರೂ ಸಹ ಈ ಸದನದಿಂದ ಸರ್ಕಾರ ಉದ್ಭವವಾಗಿರತಕ್ಕಂಥದ್ದು, ರಚನೆಯಾಗಿರತಕ್ಕಂಥದ್ದು. Your Government is created by this House. People of Karnataka looking at us that; What are we going to do, If the situation is like this and it is almost a

Constitutional crisis. There is going to be breakdown of law and order. ರಾಜ್ಯಪಾಲರು constitutionally

3-50 ಪಿ.ಎಂ.

created autonomous bodies, they are not functioning. Government has not co-operated properly with these institutions. Thereby, ther is no governance in this state ಎಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ವಿರೋಧ ಪಕ್ಷದಲ್ಲಿ ಇದ್ದರು. ಜನರು ಬಹಳ ನಿರೀಕ್ಷೆ ಮಾಡಿದ್ದರು. ಅವರು ಇಲ್ಲಿ ಕುಳಿತ್ತಿದ್ದಾಗ ನಾವು ಆ ಕಡೆ ಕೂತ್ತಿದ್ದೆವು. ನಾನು ಒಂದು ಸಲ 1999ರಲ್ಲಿ ಸೋತಿದ್ದೇವೆ. ಇಲ್ಲದಿದ್ದರೆ ನಾನು ಅಲ್ಲಿ ಅವರು ಇಲ್ಲಿ. ಈ ಸಲ ನಾನು ಇಲ್ಲಿ ಅವರು ಅಲ್ಲಿದ್ದಾರೆ. ಇಲ್ಲಿ ಪ್ರಜಾಪ್ರಭುತ್ವದ ಬಗ್ಗೆ, ಮೌಲ್ಯಗಳ ಬಗ್ಗೆ, ಸಂವಿಧಾನದ ಬಗ್ಗೆ, ನ್ಯಾಯಾಂಗದ ಬಗ್ಗೆ, ಕಾರ್ಯಾಂಗದ ಬಗ್ಗೆ ಏನೆಲ್ಲಾ ಮಾತನಾಡಿದ್ದರೆ ಎನ್ನುವ ಬಗ್ಗೆ ಈಗಲೂ ನನ್ನ ಕಿವಿಯಲ್ಲಿ ಗುಯ್‌ಗುಡುತ್ತಿದೆ. ಯಡಿಯೂರಪ್ಪನವರು ಅಧಿಕಾರಕ್ಕೆ ಬಂದ ತಕ್ಷಣವೇ ಇವೆಲ್ಲವನ್ನು ಮರೆತುಬಿಟ್ಟರಲ್ಲಾ? ಆ ಮೌಲ್ಯಗಳೆಲ್ಲಾ ಏನಾದವು? ಯಾವುದೂ ಇಲ್ಲ. 1984, ಮಾನ್ಯ ರಾಮಕೃಷ್ಣಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದರು. ಕರ್ನಾಟಕದಲ್ಲಿ ಮೌಲ್ಯಧಾರಿತ ರಾಜಕಾರಣವನ್ನು ಪ್ರತಿಪಾದನೆ ಮಾಡಿದಂಥವರು, ನಾನೂ ಸಹ ಸ್ವಲ್ಪ ದಿವಸ ಅವರ ಮಂತ್ರಿ ಮಂಡಲದಲ್ಲಿ ರೇಷ್ಮೆ ಮತ್ತು ಪಶುಸಂಗೋಪನೆ ಇಲಾಖೆಯಲ್ಲಿ ಮಂತ್ರಿಯಾಗಿದ್ದೆ ಮತ್ತು ಕನ್ನಡ ಕಾವಲು ಸಮಿತಿಯ ಅಧ್ಯಕ್ಷನಾಗಿದ್ದೆ. ಅವರು ಮುಖ್ಯಮಂತ್ರಿಯಾಗಿದ್ದ ಅವಧಿ ಪೂರ್ಣ ನಾನು ಮಂತ್ರಿಯಾಗಿರಲಿಲ್ಲ. ಎರಡು ವರ್ಷಗಳ ಕಾಲ ಮಂತ್ರಿಯಾಗಿದ್ದೆ. ಮಾನ್ಯ ಬೊಮ್ಮಾಯಿಯವರು ಮುಖ್ಯಮಂತ್ರಿಯಾಗಿದ್ದಾಗ ಸಾರಿಗೆ ಸಚಿವನಾಗಿದ್ದೆ. ರಾಮಕೃಷ್ಣ ಹೆಗಡೆಯವರು ಈ ರಾಜ್ಯದಲ್ಲಿ ಇಡೀ ದೇಶದಲ್ಲಿ ಮೊದಲ ಬಾರಿಗೆ ಲೋಕಾಯುಕ್ತ ಕಾಯಿದೆಯನ್ನು ತಂದು ಲೋಕಾಯುಕ್ತ ಮತ್ತು ಉಪಲೋಕಾಯುಕ್ತ ಸಂಸ್ಥೆಗಳನ್ನು ಹುಟ್ಟುಹಾಕಿದಂಥವರು. ಅದಕ್ಕೂ ಮೊದಲು ಇದು ಇರಲಿಲ್ಲ. ಈ

ವಿಚಾರದ ಬಗ್ಗೆ ಚರ್ಚೆಯಾಗಬೇಕೆಂದು ನಿನ್ನೆ ಯಡಿಯೂರಪ್ಪನವರು ಹೇಳಿದರು ಏಕರೂಪದ ಲೋಕಪಾಲ್ bill, ಲೋಕಾಯುಕ್ತ ಬರಬೇಕು. ಮೊಯ್ಲಿಯವರು ಹೇಳಿರುವುದು, ಇನ್ನೂ ಅನೇಕ ರಾಜ್ಯಗಳಲ್ಲಿ ಲೋಕಾಯುಕ್ತ ಸಂಸ್ಥೆಯೇ ಸ್ಥಾಪನೆಯಾಗಿಲ್ಲ, ಅಸ್ತಿತ್ವಕ್ಕೆ ಬಂದಿಲ್ಲ. ಹಾಗಾಗಿ ಅವರು ಆ ಹಿನ್ನೆಲೆಯಲ್ಲಿ ಮಾತನಾಡಿದ್ದಾರೆ. ಬಹಳ ಸಂತೋಷ. ಏಕ ರೂಪಕ bill ಬರಬೇಕು. ಅಧಿಕಾರ ಅವರಿಗೆ ಎಷ್ಟುಕೊಡಲು ಸಾಧ್ಯವಾಗುತ್ತದೆ ಅಷ್ಟನ್ನು ಕೊಡಬೇಕು. ಅದರ ಬಗ್ಗೆ ಚರ್ಚೆ ಮಾಡೋಣ. ಆದರೆ, ಇಲ್ಲಿ ಪ್ರಶ್ನೆ ಇರತಕ್ಕದ್ದು, It is not the contention of Lokayukta that he has not been given supreme power. The issue is; the Government headed by Sri B.S.Yedyurappa has shown non Co-operation. ನಾನು ಒಂದು ಸಲ ಬಳ್ಳಾರಿಗೆ ನಮ್ಮ ಸಿಬ್ಬಂದಿಯ ಜೊತೆ ಹೋದಾಗ ಪ್ರಾಣ ಬೆದರಿಕೆ ಒಡ್ಡಿದರು ಎಂದು ರಿಪೋರ್ಟ್‌ನಲ್ಲಿ ಹೇಳಿದ್ದಾರೆ. ಅವರು ವರದಿಯಲ್ಲಿ ಒಂದು ಮಾತನ್ನು ಹೇಳಿದ್ದಾರೆ, ಓದಿರುವ ಹುಡುಗರು, ಪಾಪ educationನ್ನು ಮಧ್ಯೆದಲ್ಲಿ ಬಿಟ್ಟುಬಿಟ್ಟಿರುತ್ತಾರೆ, ಅವರೆಲ್ಲಾ ಅಲ್ಲಿ ಮೋಟರ್ ಬೈಕ್‌ನ್ನು ತೆಗೆದುಕೊಂಡು ಬರ್, ಬರ್ ಎಂದು ಓಡಾಡುತ್ತಿರುತ್ತಾರೆ. ಸಂಡೂರು, ಬಳ್ಳಾರಿಗೆ, ಹೊಸಪೇಟೆಗೆ ಹೋದರೆ ಹಿಂದುಗಡೆ ಮೋಟರ್‌ಬೈಕ್ ಮೇಲೆ ಬರ್ ಎಂದು ಬರುತ್ತಾರೆ. ನಾನು ಇತ್ತೀಚೆಗೆ ಎರಡು ತಿಂಗಳ ಹಿಂದೆ ಸಂಡೂರಿನ ರಾಮ್‌ಘಡಕ್ಕೆ ಹೋಗಿದ್ದೆ. ಅಲ್ಲಿ ಯಾರೋ ಹತ್ತು ಮೋಟರ್‌ಬೈಕ್‌ನಲ್ಲಿ ಹುಡುಗರು ಒಂದೊಂದು ಮೋಟರ್ ಬೈಕ್‌ಮೇಲೆ ಮೂರು ಮೂರು ಜನ ಕುಳಿತುಕೊಂಡಿದ್ದಾರೆ, ಸಿನಿಮಾದಲ್ಲಿ ನೋಡುತ್ತೇವಲ್ಲಾ ಆ ರೀತಿ ಏನೋ ಬಟ್ಟೆಯನ್ನು ಕಟ್ಟುಕೊಂಡಿದ್ದಾರೆ, ಅವರು ಒಂದು ರೀತಿ ಭಯೋತ್ಪಾದಕರ ರೀತಿ ಇದ್ದರು, ಅದನ್ನೇ ಯಡಿಯೂರಪ್ಪನವರು ಆ ಕಡೆಯಲ್ಲಾ ಭಯೋತ್ಪಾದಕರು ಇದ್ದಾರೆಂದು ಹೇಳಿದ್ದು!. ಅದು ಶ್ರೀರಾಮಲುರವರೆ ನಿಮಗೆ ಗೊತ್ತಿಲ್ಲವೇ? ಅಲ್ಲಿ illegal mining ನಡೆಯುತ್ತಿದೆಯೆಂದು ಯಾರೋ ಹೇಳಿದರು. ಆದ್ದರಿಂದ ಸಂಡೂರಿನ ರಾಮ್‌ಘಡಕ್ಕೆ ಹೋಗಿದ್ದೆ. Luckily ನನ್ನ ಜೊತೆ 10–12

ಕಾರುಗಳು ಬಂದಿದ್ದವು. ಇಲ್ಲದಿದ್ದರೆ ಆ ಮೋಟರ್ ಬೈಕ್ನವರು ಏನು ಮಾಡುತ್ತಿದ್ದರೋ ಗೋತ್ತಿಲ್ಲ. ಏಕೆಂದರೆ, ನಾನು ಬರುವ ಬಗ್ಗೆ ಅಲ್ಲಿನ ಎಸ್.ಪಿ., ಡಿ.ಎಫ್.ಒ., Mines and Geology ನ Deputy Director, ಪೊಲೀಸ್ನವರಿಗೆ ಹೇಳಿದ್ದೇನೆ. ಆದರೆ, ಅಲ್ಲಿ ಒಮದು ನೊಣ ಇಲ್ಲ. ಸಿದ್ದು ಸವದಿಯವರೆ ಅಲ್ಲಿಗೆ ನೀವು ಯಾವತ್ತಾದರು ಹೋಗಿದ್ದೀರಾ? ಹೋಗಿಲ್ಲದಿದ್ದರೆ ಸುಮ್ಮನಿರಿ, ನಾನು ಹೋಗಿ ಕಷ್ಟವನ್ನು ಹೇಳಿಕೊಳ್ಳುತ್ತಿದ್ದೇನೆ. ಅದನ್ನು ಇಲ್ಲಿ ಹೇಳದೆಯೇ ಇನ್ನೆಲ್ಲಿ ಹೇಳಬೇಕು? ನಾನು ಅಲ್ಲಿ ಎಲ್ಲೆಲ್ಲಿ ಹೋಗುತ್ತೇನೆ ಅಲ್ಲೆಲ್ಲಾ ಮಣ್ಣನ್ನು ಸುರಿದು ರಸ್ತೆಯನ್ನು block ಮಾಡಿಬಿಟ್ಟಿದ್ದಾರೆ. ಯಡಿಯೂರಪ್ಪನವರೆ ನಿಮಗೂ ಒಂದು ಸಲ ಹೋದಾಗ ಅದೇ ಗತಿಯಾಯಿತು. ನಿಮ್ಮನ್ನು ನೋಡಲು ಡಿ.ಸಿ., ಎಸ್.ಪಿ., ಯಾರೂ ಬಂದಿರಲಿಲ್ಲ. ಅಲ್ಲಿ ಹೇಗಾಗಿತ್ತು ಎಂದರೆ, ನಾನು ಹೋಗುವುದಕ್ಕೆ ಆಗುವುದಿಲ್ಲ, ಒಂದು ಕಡೆ ಈ ಹುಡುಗರು ಹತ್ತತ್ತು ಬೈಕ್ನಲ್ಲಿ ಒಂದೊಂದರೆ ಮೇಲೆ ಮೂರು ಮೂರು ಜನ ಕುಳಿತಿದ್ದಾರೆ. ಅವರನ್ನು ನೋಡಿದರೆ ಭಯ ಆಗುತ್ತದೆ. ಆ ರೀತಿ ಇದ್ದಾರೆ ಅವರನ್ನು ಎಲ್ಲಿಂದ ಹುಡುಕಿಕೊಂಡು ಬಂದಿದ್ದಾರೋ, ಅವರು ಎಲ್ಲಿಂದ ಬಂದಿದ್ದಾರೋ ನನಗೆ ಗೋತ್ತಿಲ್ಲ. ಅವರು ನಿಮ್ಮ ಬಳ್ಳಾರಿ ಜಿಲ್ಲೆಯವರೋ ಅಥವಾ ಬೇರೆ ಬೇರೆ ಕಡೆಯವರೋ? ಮೈಸೂರಿನವರಾ? ನೀವು ಮೈಸೂರಿನವರನ್ನು ಎಲ್ಲಿ ನೋಡಿದ್ದೀರಿ? ಹೋಗಲಿ ನೀವು ಹೋಗಿದ್ದಾಗ ಮೈಸೂರಿನವರು ಎಂದು ಪತ್ತೆ ಆಯಿತೇ? ಅಥವಾ ಅವರು ನಿಮ್ಮ ಸ್ನೇಹಿತರಾ? ನಾನು ಸತ್ಯ ಹೇಳುತ್ತಿದ್ದೇನೆ You take the report from the officers. As a Leader of the Opposition when I went there, no not even a constable was there. ಯಡಿಯೂರಪ್ಪನವರು ಸಿದ್ದರಾಮಯ್ಯನವರು ನಮಗೆ co-operate ಮಾಡುವುದಿಲ್ಲ, ನನಗೆ ನೋವಾಗುತ್ತದೆ ಎಂದು ಹೇಳುತ್ತಾರೆ. ಅದರೆ, ಇದೆಯೇ ನಿಮ್ಮ Co-operation? ಇದೆಯೇ ನಮಗೆ ನೀವು ಕೊಡುವ ಗೌರವ? ಈ ರೀತಿ ಮೋಟರ್ ಬೈಕ್ನಲ್ಲಿ ನನ್ನನ್ನು follow ಮಾಡಿ ಹೆದರಿಸತಕ್ಕ ಪರಿಸ್ಥಿತಿ ನಿರ್ಮಾಣ ಆಗಿರುವುದು ಈ ಸರ್ಕಾರದಲ್ಲಿ. I have not come across in

my political career in no part of our state I have seen such a scene. ನನ್ನ ಜೊತೆ 10 ಕಾರುಗಳು ಇರದಿದ್ದರೆ ನನ್ನನ್ನು ಅವರು ಏನು ಮಾಡುತ್ತಿದ್ದರೋ ಗೊತ್ತಿಲ್ಲ. ನನಗೆ ಯಾರೋ ಬಂದು ಸಾರ್ ನೀವು ಹೇಗೋ ಬದುಕಿ ಬಂದಿದ್ದೀರಿ, ಅವರುಗಳು ಎಸ್.ಪಿ.ಗೆ ಸಿದ್ದರಾಮಯ್ಯನವರನ್ನು ಅರೆಸ್ಟ್ ಮಾಡಿಯೆಂದು ಹೇಳಿದಂತೆ ಎಂದು ಹೇಳಿದರು. ಅವರು ರಾಮಘಡಕ್ಕೆ ಹೋಗಬಾರದು. Arrest him. ಆ ಎಸ್.ಪಿ. ಹೆದರಿಕೊಂಡೇ ನನ್ನನ್ನು ಅರೆಸ್ಟ್ ಮಾಡಲಿಲ್ಲ.

(ಶ್ರೀ ಎನ್. ಯೋಗಿಶ್‌ಭಟ್ ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅವನು ಹೆದರಿಕೊಂಡನೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಎಸ್ಪಿ ಆ ಕಡೆಗೆ ಅವತ್ತು ಏಕೆ ಬರಲಿಲ್ಲವೋ ನನಗೆ ಗೊತ್ತಿಲ್ಲ. ಅವರ್ಯಾರೋ ಮೋಟಾರ್ ಬೈಕ್‌ನಲ್ಲಿ ಹುಡುಗರು ಬಂದಿದ್ದರಲ್ಲಾ, ಅವರು ಹೊಡೆಯುವುದಾದರೆ ಹೊಡೆದುಕೊಳ್ಳಿ ಎಂದು ಆ ಕಡೆಗೆ ಬರಲಿಲ್ಲವೋ ಏನೋ ಗೊತ್ತಿಲ್ಲ. This has happened and it is 100% proved. ಅದನ್ನೇ ಮಾನ್ಯ ಲೋಕಾಯುಕ್ತರು ಡಿಸೆಂಬರ್ 2008ರಲ್ಲಿ ನೀಡಿದ ತಮ್ಮ first reportನಲ್ಲಿ ಹೇಳಿದ್ದಾರೆ. ಪಾಪ! ಆ ಹುಡುಗರಿಗೆ ವಿದ್ಯೆಯೂ ಇಲ್ಲ, ಒಳ್ಳೆಯ ಸಂಸ್ಕಾರವೂ ಇಲ್ಲ. ಅವರಿಗೆ ಒಳ್ಳೆಯ ನಡವಳಿಕೆಯೂ ಇಲ್ಲದಂತೆ ಮಾಡಿಬಿಟ್ಟಿದ್ದಾರೆ. ಅವರು ಅಲ್ಲಿ ರೌಡಿಗಳಾಗಿ ಬಿಟ್ಟಿದ್ದಾರೆ. ಲೋಕಾಯುಕ್ತರು ಇದನ್ನೆಲ್ಲಾ ತಮ್ಮ reportನಲ್ಲಿ ಹೇಳಿದ್ದಾರೆ. ಅವರ ಶಿಫಾರಸ್ಸುಗಳಲ್ಲಿ ಇದೂ ಒಂದು. This is one of his recommendations. ನಾನೂ ಕೂಡ ಕಣ್ಣಾರೆ ಅದನ್ನು ಕಂಡಿದ್ದೇನೆ. I am an eye witness. ಇಂತಹ ಪರಿಸ್ಥಿತಿಯಲ್ಲಿ ಕೆಲಸ ಮಾಡುವವರು ಸಹಕರಿಸಿದರೆ ಮಾನ್ಯ ಪಾಲೇಮಾರ್‌ರವರು ಅವರನ್ನು ಸಸ್ಪೆಂಡ್ ಮಾಡಲಿಕ್ಕೆ ಬರೆದಿದ್ದಾರೆ. ನೀವು ಅಲ್ಲಿ ಅವನು ಯಾರೋ ಮಹೇಶ್ ಬಿಳಿಯನನ್ನು ಸಸ್ಪೆಂಡ್ ಮಾಡಿದ್ದೀರಿ. 5 ಲಕ್ಷ ಟನ್ ಕದ್ದು ಬಿಟ್ಟಿದ್ದಾರಲ್ಲಾ, ಅವರಿಗೇನು ಮಾಡಿದ್ದೀರಿ? ಯಾರು ಅವರು ? ನೀವೇ 6 ಲಕ್ಷ ಟನ್ ಎಂದು

ಹೇಳಿದ್ದೀರಿ. ನಾನು 5 ಲಕ್ಷ ಟನ್ ಎಂದು ಹೇಳುತ್ತಿದ್ದೇನೆ. ಅದನ್ನು ಕದ್ದವರಿಗೆ ಏನು ಮಾಡಿದ್ದೀರಿ? ನಿಮ್ಮ ಪ್ರಕಾರವೇ 5 ಲಕ್ಷ ಟನ್ ಅದಿರಿನ ಮೌಲ್ಯ 200 ಕೋಟಿ ರೂ.ಗಳಾಗುತ್ತದೆ. ಅದು ಹೊರಟು ಹೋಯಿತಲ್ಲಾ? ಮಿನಿಸ್ಟರ್‌ರವರೇ ಈ ಬಗ್ಗೆ ಹೇಳಿದ ಮೇಲೆ, ನಾನು ಆ ಬಗ್ಗೆ ಹೇಳಲೇಬೇಕಲ್ಲವೇ? It is not a statement of the press. There are sufficient evidence to show that 8 ಲಕ್ಷ 5 ಸಾವಿರ ಮೆಟ್ರಿಕ್ ಟನ್ was seized. ಅದಕ್ಕೆ evidence ಇದೆಯಲ್ಲಾ? ಅಂಕೋಲಾದ JMFC Courtನಲ್ಲಿ ಆ ಬಗ್ಗೆ ಕೇಸ್ ಇದೆಯಲ್ಲಾ? ಮಹಜರು ಆಗಿದೆಯಲ್ಲಾ? ಆ ಮಹಜರ್ ಬರೆದಿದ್ದೇ ತಪ್ಪೇ? ಪತ್ರಿಕೆಯಲ್ಲಿ ಬಂದಿರುವುದನ್ನೇ ನೋಡಿ ಅಲ್ಲಿ ಮಹಜರು ಮಾಡಿದ್ದಾರೆಯೇ? How about this Mahesh Bilia ಅದಕ್ಕೆ ಸೈನ್ ಮಾಡಿದರು? ಅವರು ಎದುರುಗಡೆ ಇದು ಮಹಜರು ಆಗಿದೆ. It is not a statement. A complaint was lodged in the JMFC Court. Mahazar was drawn before the Forest Officer, Port Officer and along with this Mahazar it was submitted to the Court. Court has accepted the FIR Mahazar and other documents pertaining to the seized Iron-ore. This Mahazar was drawn on 20th March 2010. ಅದು ಸುಳ್ಳೇ? Can anybody dispute it? Nobody can dispute it. ನಿನ್ನೆ ಮಾನ್ಯ ಯಡಿಯೂರಪ್ಪನವರು 2007–08ರಲ್ಲಿ 45 ಲಕ್ಷ ಟನ್ ಕದ್ದಿದ್ದಾರೆಂದು ಹೇಳಿದ್ದಾರೆ. ಹಾಗೆಯೇ 2009–10ರಲ್ಲಿ ಒಟ್ಟು ಅದರು export ಆಗಿರುವುದು ಎಷ್ಟು? ಅದು nearly 70 lakhs metric tones of Iron-ore. ಅದರಲ್ಲಿ about 30% of the exported Iron-oreಗೆ valid permit ಇದೆ. 70% of the exported Iron-oreಗೆ no valid permits. All are bogus permits. It is also admitted by the Government by filing an affidavit before the Hon'ble High court of Karnataka that 35 lakhs metric tonnes fo Iron-ore is

transported/exported without any valid permit. How is that it has happened? How could it be? How can it be happened? What is Government the doing? That's what Lokayuktha said. It is not just 5 lakh million tones of Iron-ore. There are documents to show that they are the seized invalid permits, illegal permits, bogus permits of 40 gunny bags. ಅದಕ್ಕೆ ಅವರು ಏನು ಹೇಳಿದ್ದಾರೆ ಎಂದರೆ, taking one metric tonneಗೆ ಇವತ್ತಿನ ರೇಟ್ 150ರಿಂದ 160 ಡಾಲರ್ ಇರಬಹುದು, ಲೋಕಾಯುಕ್ತರು ತಮ್ಮ reportನಲ್ಲಿ ಏನು ಹೇಳಿದ್ದಾರೆ ಎಂದರೆ, ಇದಕ್ಕೇನು ದಾವೆ, ಫಿರ್ಯಾದುಗಳು ಏನೂ ಇರುವುದಿಲ್ಲ. Royalty ಕೂಡ ಇದಕ್ಕೆ ಇರುವುದಿಲ್ಲ. ಇದು ಎಲ್ಲಿಂದ generate ಆಯಿತು ಎಂದು ದಾಖಲಾತಿಗಳು ಇರುವುದಿಲ್ಲ. ಎಲ್ಲಿಂದ extract ಆಯಿತು? ಎಲ್ಲಿಂದ ಇದು truckಗೆ load ಆಯಿತು ಎನ್ನುವುದಕ್ಕೂ ದಾಖಾಲಾತಿಗಳಿರುವುದಿಲ್ಲ. ಏನೂ ದಾಖಲಾತಿಗಳು ಇರುವುದಿಲ್ಲ. There are seven check posts from Bellary, hospet, sandur to Belekeri port. Police check posts are there. Forest check posts are there. Mines and Geology check posts are there. Commercial Tax check posts are there. What are these check posts doing? When such a high quantity of Iron-ore is transported without valid permit, what all these check posts are doing? Has any one of the officers working under thes check posts has been punished? No. Nobody is punished so far. Then what is that Government doing? Is Government is there or not? This is a natural question every body is asking. Nobody has checked illegal transportation of Iron-ore. The natural resources are the Wealth of the State, that is the latest decision given by the Supreme Court of India. According to Hon'ble

Lokayuktha and also according to Government 35 lakhs metric tonnes of Iron-ore have been exported withour valid permits. That means to say, it is about 2500 crores, even taking into account at the rate of 100 dollars per metric tonne. According to Hon'ble Lokayuktha there are documents to the tunes of 35 lakhs of metric tones of Iron-ore being transported without valid permits. It may run to 50 lakhs metric tones of Iron-ore. Take a 50 lakhs metric tones of Iron-ore is exported without valid permit, calculating hundred rupees per metric tone, it comes to about 2,500 Crores. This is the magnitude of the illegal export. ವರ್ಷಕ್ಕೆ ಎಷ್ಟಾಗುತ್ತದೆಂದು ಹೇಳುವುದಕ್ಕೆ ಬರುವುದಿಲ್ಲ, ವರ್ಷಕ್ಕೆ ರಫ್ತಾಗಿರುವುದು, about 2009-10ನಲ್ಲಿ ಲೆಕ್ಕ ಸಿಕ್ಕಿರುವುದು 65 ಲಕ್ಷ ಮೆಟ್ರಿಕ್ ಟನ್. ಪ್ರತಿವರ್ಷ ಎಷ್ಟೆಷ್ಟಾಗಿದೆ ಎಂದು ಹೇಳುತ್ತೇನೆ:2003–04ರಲ್ಲಿ quality exported 99,000 ಮೆಟ್ರಿಕ್ ಟನ್, 2004–05ರಲ್ಲಿ 9,20,000 ಮೆಟ್ರಿಕ್ ಟನ್, 2005–06ರಲ್ಲಿ 15,57,000 ಮೆಟ್ರಿಕ್ ಟನ್, 2006–07ರಲ್ಲಿ 43,59,527 ಮೆಟ್ರಿಕ್ ಟನ್, 2007–08ರಲ್ಲಿ 63,09,754 ಮೆಟ್ರಿಕ್ ಟನ್, 2008–09ರಲ್ಲಿ 13,20,756 ಮೆಟ್ರಿಕ್ ಟನ್, ಈ ವರ್ಷ ಅದು recession period, ಆಗ ಜಗತ್ತಿನಲ್ಲಿ ರಿಸೆಷನ್ ಇತ್ತು ಆದುದರಿಂದ ಹೆಚ್ಚು ರಫ್ತಾಗಲಿಲ್ಲ. ಇದರಲ್ಲಿ 70% ಇದೆ, 70% of total exported Iron-ore. ಕಳೆದ ವರ್ಷ 2009–10ರಲ್ಲಿ, 65,01,805 ಮೆಟ್ರಿಕ್ ಟನ್, ಇದರಲ್ಲಿ 70–75% ಮುನಿಯಪ್ಪನವರೆ, ನೀವು ಕೂಡ ಗಣಿ ಮಂತ್ರಿಗಳಾಗಿದ್ದಿರಿ, ಹೀಗೆ ಆಗುತ್ತದೆಂದು ನೀವು ಉಹಿಸಿಕೊಳ್ಳುವುದಕ್ಕು ಆಗುವುದಿಲ್ಲ. ಇದು ಎಲ್ಲಿ extract ಆಯಿತು, ಯಾರು ರಫ್ತು ಮಾಡಿದರು, ಎಲ್ಲಿಗೆ ರಫ್ತು ಮಾಡಿದರು, ಎಲ್ಲಿಗೆ ದುಡ್ಡು ಹೋಗಿ ಸೇರಿತು, ಯಾವುದು ಗೊತ್ತಿಲ್ಲ. ಈ ರೀತಿ ನಡೆಯುತ್ತಿರುವುದನ್ನು ಲೋಕಾಯುಕ್ತರು ಬೇಲಿಕೇರೆ

ಬಂದರಿಗೆ ಹೋಗಿ ಪತ್ತೆ ಹಚ್ಚುತ್ತಾರೆ. ಅವರಿಗ ಜನವರಿ 2010ರಲ್ಲಿ ಒಂದು uranimous letter ಬರುತ್ತದೆ. ಮಾನ್ಯ ಯು.ವಿ.ಸಿಂಗ್ ಅವರು one of the honest officers of Karnataka. ಫಾರೆಸ್ಟ್ ಇಲಾಖೆಯಲ್ಲಿ ಅವರು PCCF ಆಗಿದ್ದರು. ಅವರೇ ಬಳ್ಳಾರಿಗೆಲ್ಲ ಹೋಗಿ illegal ಆಗಿ ನಡೆಯುವ ಮೈನಿಂಗ್ ಅನ್ನು inspect ಮಾಡಿ ವರದಿ ಕೊಟ್ಟರು. ಜೊತೆಯಲ್ಲಿ ಗೋಕುಲ್, DCF ಇದ್ದರು. ಇವರನ್ನೇ ಈಗ ಅಮಾನತ್ತಿನಲ್ಲಿಡಬೇಕೆಂದು ಮಾನ್ಯ ಮಂತ್ರಿಗಳಾದ ಶ್ರೀ ಕೃಷ್ಣಾ ಪಾಲೇಮಾರ್ ಅವರು ಬರೆದಿದ್ದಾರೆ. ಅವರ ಜೊತೆಗೆ ACF ಇತ್ತಲಪಕ್ಕಿ ಎನ್ನುವವರು ಹೋಗಿದ್ದರು. ಅವರನ್ನು ಮೊನ್ನೆ ಮೊನ್ನೆ ವರ್ಗಾವಣೆ ಮಾಡಿ ಬೀದರ್‌ಗೆ ಹಾಕಿದ್ದಾರೆ. ಇತ್ತಲಮಕ್ಕಿ is transferred on 26th of this month, after Lokayuktha resigned and he is the Investigating Officer of this 5 Lakhs metric tones of Iron-ore case. ಇದು ಅವರಿಗೆ ಸಿಕ್ಕಿರುವ ಉಡುಗೊರೆ. ಅವರಿಗೆ ಸಿಕ್ಕಿರುವ ಉಡುಗೊರೆ ಏನಪ್ಪ ಅಂದರೆ, transfer from Karawar to Bidar. ಏಕೆಂದರೆ, ಇದನ್ನು ಅವನು ಪತ್ತೆ ಹಚ್ಚಿಬಿಟ್ಟನಲ್ಲ, ಈ ಗೋಕುಲ್ ಅವರ ಜೊತೆಯಲ್ಲಿ ಸೇರಿಕೊಂಡು ಪತ್ತೆ ಹಚ್ಚಿ ಬಿಟ್ಟನಲ್ಲ. ಪತ್ತೆಹಚ್ಚಿಬಿಟ್ಟು ಇವರು ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸಿಬಿಟ್ಟರಲ್ಲ ಎಂದು ಒಬ್ಬನನ್ನು ಅಮಾನತ್ತಿನಲ್ಲಿಡುವುದಕ್ಕೆ ಮತ್ತೊಬ್ಬನ್ನು ವರ್ಗಾವಣೆ ಮಾಡುವುದು. In addition to that, as far as my knowledge is concerned, ನನಗೆ ಲಾ ಗೊತ್ತಿರುವ ಮಟ್ಟಿಗೆ legal position ಏನು ಅಂದರೆ, Lokayuktha has already started investigation, seized the Iron-ore to the tune of 8,05,000 metric tones and mahazar was drawn; it was handed over to that Narendra Biliya, who is a Conservator of port. ಏಕೆಂದರೆ, ಇದು ದೊಡ್ಡ ಪ್ರಮಾಣದಲ್ಲಿರುವುದರಿಂದ ಬೇರೆಯವರು ಇದನ್ನು ಎಲ್ಲಿಗೂ ತೆಗೆದುಕೊಂಡು ಹೋಗಲಾಗವುದಿಲ್ಲವೆಂದು ಇದನ್ನು ನೀವೇ ನೋಡಿಕೊಳ್ಳಿ,

ಅಲ್ಲೇ ಇರಲಿ, ಇದನ್ನು ರಫ್ತು ಮಾಡಲು ಕೊಡಬೇಡಿ, ಅಲ್ಲೇ ಇಟ್ಟಿರಿ ಎಂದು ಹೇಳುತ್ತಾರೆ. ಅದರಲ್ಲಿ ಕೆಲವರು ಅದು ನಮಗೆ ಸೇರಬೇಕೆಂದು ಹೈಕೋರ್ಟಿನಲ್ಲಿ ಅರ್ಜಿ ಹಾಕಿಕೊಂಡಿದ್ದಾರೆ. There are eleven such exporters. ಅವರಿಗೆ ಕೋರ್ಟಿನಲ್ಲೇನೂ ಕೊಟ್ಟಿಲ್ಲ. ಅವರು ಎಷ್ಟಕ್ಕೆ ಕೇಳಿರುವುದು ಅಂದರೆ, ಪತ್ತೆಯಾದ 8,05,000 ಮೆಟ್ರಿಕ್ ಟನ್ ಐರನ್ ಒರ್‌ನಲ್ಲಿ ಬರೀ 3,00,000 ಕ್ಕೆ ಮಾತ್ರ ಕೇಳಿದ್ದಾರೆ. ಇನ್ನು 5,00,000 ಕ್ಕೆ there are no claimants at all. For remaining 5 Lakhs of metric tones of Iron-ore, no asker and no taker. There are no claimants. That means to say, if there are no claimants, the entire 5 lakshs metric tones of Iron-ore is illegally extracted. That is the product of illegal mining. The value of 5 lakhs metric tones of Iron-ore comes to about Rs.2500 Crores. ಇಲ್ಲಿ ನಮ್ಮ ಹತ್ತಿರ ಕುಡಿಯುವುದಕ್ಕೆ ನೀರಿಲ್ಲ, ಬಡವರಿಗೆ ಮನೆ ಕಟ್ಟಿಕೊಡಲು ದುಡ್ಡಿಲ್ಲ, ಅಲ್ಲಿ ಪಾಪ ರೈತರು ಬೆಳೆ ಕಳೆದುಕೊಂಡರು, ಮನೆ ಕಳೆದುಕೊಂಡರು, ಸಾಲ ಮನ್ನ ಮಾಡಿ ಎಂದರೆ, ದುಡ್ಡಿಲ್ಲ. ಆದರೆ ಎರಡೂವರೆ ಸಾವಿರ ಕೋಟಿ ರೂಪಾಯಿ ನಮ್ಮ ಕಣ್ಣೆದುರಿಗೆ ಹರಿದು ಕಳ್ಳರ ಜೇಬಿಗೆ ಹೋಗುತ್ತಾ ಇದೆ. ಸರ್ಕಾರದ ಸಂಪತ್ತು, ಜನರ ಸಂಪತ್ತು ರಾಜ್ಯದ exchequerಗೆ ಬರಬೇಕಾದ ಸಂಪತ್ತು ಮಾನ್ಯ ಯಡಿಯೂರಪ್ಪನವರೇ ಒಮ್ಮೆ ಹೇಳಿದ್ದಾರೆ. It is not my statement. ಮಾನ್ಯ ಯಡಿಯೂರಪ್ಪನವರೇ ಶಿವಮೊಗ್ಗದಲ್ಲಿ KDP ಮೀಟಿಂಗ್‌ನಲ್ಲಿ ಅರಣ್ಯದಲ್ಲಿ ಲೂಟಿ ಆಗುತ್ತಿದೆ, ಏನು ಮಾಡುತ್ತಿದ್ದೀರಿ ಎಲ್ಲ ಚಿಲ್ಲರೆ ತೆಗೆದುಕೊಂಡು ಬರುತ್ತಿದ್ದೀರಿ. ಅರಣ್ಯದಲ್ಲಿ ಕೋಟಿ ಗಟ್ಟಲೆ ಲೂಟಿ ಆಗುತ್ತಿದೆ ಎಂದು ಹೇಳಿದರು. Again in

4-20 ಪಿ.ಎಂ.

the month of October ಬೆಂಗಳೂರಿನ ಅರಣ್ಯ ಭವನದಲ್ಲಿ Martyr's Day ಅಟೆಂಡ್ ಮಾಡಿ, there he made a statement. ಬಳ್ಳಾರಿಯಲ್ಲಿ

ಸಾವಿರಾರು ಕೋಟಿ ರೂಪಾಯಿ ನಮ್ಮ ರಾಜ್ಯದ ಸಂಪತ್ತು ಲೂಟಿ ಆಗುತ್ತಿದೆ. "I am helpless. ನನ್ನ ಕೈಯಲಿ ತಡೆಯುವುದಕ್ಕೆ ಆಗುತ್ತಿಲ್ಲ". Who is responsible for this? ನಿಮಗೆ ಜನ ಅಧಿಕಾರ ಕೊಟ್ಟು ಈ ರಾಜ್ಯದ ಸಂಪತ್ತುನ್ನು ರಕ್ಷಣೆ ಮಾಡಬೇಕು, ಸಂಪತ್ತು ರಕ್ಷಣೆ ಮಾಡಿ, ಈ ರಾಜ್ಯದ ಜನರ ಕಲ್ಯಾಣ ಮಾಡಬೇಕು, that is the mandate given by the people of this state. ಮಾನ್ಯ ಮುಖ್ಯಮಂತ್ರಿಗಳೇ 'ನಾನು ಅಸಹಾಯಕ' ಎಂದು ಹೇಳಿದರೆ ಯಾರು ಇದನ್ನು ರಕ್ಷಣೆ ಮಾಡುವವರು? ಯಾರಿಂದ ರಕ್ಷಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ? ನಿಮ್ಮದೇ statement ಇಲ್ಲಿ ಇದೆ ಹೇಳುತ್ತೇನೆ. ಅದಿರು ಲೂಟಿ ತಡೆಯುವುದಕ್ಕೆ ಸಾಧ್ಯವಾಗುತ್ತಿಲ್ಲ.' Chief Minister of the state made this statement. ಗಣಿಗಾರಿಕೆ ತಡೆಗೆ ವಿಫಲ–ಮಾನ್ಯ ಮುಖ್ಯಮಂತ್ರಿ ಒಪ್ಪಿಗೆ. 'ಇದು ಈ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಹೇಳಿರತಕ್ಕಂಥದ್ದು. ಈ ವರ್ಷದ ಜನವರಿಯಲ್ಲಿ ಇವರು ಬಳ್ಳಾರಿಗೆ ಹೋಗಿ ಜಿಂದಾಲ್ ಗೆಸ್ಟ್ ಹೌಸ್ ಹೆಲಿಪ್ಯಾಡ್ ಹತ್ತಿರ ಪತ್ರಿಕೆಯವರಿಗೆ ಹೇಳುತ್ತಾರೆ. ಪತ್ರಿಕೆಯವರು ಏನು ನೀವು ಹೀಗೆಲ್ಲಾ ಹೇಳಿದರೆ, ಇಲ್ಲೀಗಲ್ ಮೈನಿಂಗ್ ನಡೆಯುತ್ತಿದೆ, ಕೋಟಿಗಟ್ಟಲೆ ಹಣ ನಷ್ಟವಾಗುತ್ತಿದೆ. ಸಾವಿರಾರು ಕೋಟಿ ರೂಪಾಯಿ ಲೂಟಿ ಆಗುತ್ತಿದೆ ಎಂದು ಹೇಳಿದಿರಿ. ಬಳ್ಳಾರಿ ಏನು ನಡೆಯುತ್ತಿದೆ ಎಂದು ಕೇಳಿದರೆ ಈಗ ಏನು ಹೇಳುತ್ತೀರಿ, 'no illegal mining in Bellary. No ಅಕ್ರಮ ಗಣಿಗಾರಿಕೆ in Bellary.' ಇದು ಮಾನ್ಯ ಯಡಿಯೂರಪ್ಪನವರ Statement. ನನ್ನದಲ್ಲ. Within a span of 2-3 months. ಮಾನ್ಯ ಯಡಿಯೂರಪ್ಪನವರು ಹಿಂದೆ ಹೇಳಿದ್ದೆಲ್ಲಾ ಸತ್ಯ. ಶಿವಮೊಗ್ಗದಲ್ಲಿ ಹೇಳಿದ್ದು ಸತ್ಯ, ಕರ್ನಾಟಕ ಅರಣ್ಯ ಭವನದಲ್ಲಿ ಹೇಳಿದ್ದು ಸತ್ಯ. ಅದರೆ ಜನವರಿಯಲ್ಲಿ ಹೇಳಿದ್ದು ಮಾತ್ರ ಸತ್ಯಕ್ಕೆ ದೂರವಾದದು. "ನನ್ನ ಕೈಯಲ್ಲಿ ತಡೆಯುವುದಕ್ಕಾಗುತ್ತಿಲ್ಲ. I am helpless. If you can't protect the

wealth of the state, ನೀವು ಏಕೆ ಮುಖ್ಯಮಂತ್ರಿ ಆಗಿರಬೆಕು? ನೀವೇ ಹೇಳಿರುವ ಮಾತು ಇದು ನನ್ನದಲ್ಲ. Why you should be there in the chair of the Chief Ministers? ಏಕೆ ಇರಬೇಕು? ಇದು ಇವತ್ತು ರಾಜ್ಯದ ತುಂಬ ಚರ್ಚೆಯಾಗುತ್ತಿದೆ. ಜನವರಿಯಲ್ಲಿ ಅವರೇ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಒಂದು ಸಾರಿ 'ರಾಜ್ಯದ ಸಂಪತ್ತು ಲೂಟಿ ಆಗುತ್ತಿದೆ.' ಎಂದು ಹೇಳುತ್ತಾರೆ, ಇನ್ನೊಂದು ಸಾರಿ 'ನಾನು ಅಶಕ್ತನಾಗಿದ್ದೇನೆ. I am not able to prevent. I am helpless' ಎಂದು ಇನ್ನೊಂದು ಸಾರಿ ಹೇಳುತ್ತಾರೆ. ಆ ಮೇಲೆ 'There is no illegal mining in the state. Not only in Bellary, nowhere in the state. Illegal mining ಇಲ್ಲ. Illegal mining ಇಲ್ಲವೆಂದರೆ ನಿಮಗೆ ಖಾತರಿ ಆಗಿದ್ದರೆ ಮೊನ್ನೆ ಬೇಲಿಕೇರಿಯಲ್ಲಿ ಸಿಕ್ಕಿದೆಯಲ್ಲ 500 ಮೆಟ್ರಿಕ್ ಟನ್ ಅದಿರು ಯಾವುದು? ಅದು ಹೇಗೆ ಬಂದಿತು? ಅದನ್ನು ತೆಗೆದುಕೊಂಡು ಬಂದವರು ಯಾರು? ಆ ದುಡ್ಡು ಯಾರಿಗೆ ಹೋಯಿತು? 2500 ಕೋಟಿ ರೂ. ಯಾರಿಗೆ ಹೋಯಿತು? ಯಾರ್ಯಾರು ಇದರಲ್ಲಿ ಶಾಮೀಲಾಗಿದ್ದಾರೆ, ಅದರಲ್ಲಿ ಯಾರ್ಯಾರಿಗೆ ದುಡ್ಡು ಹಂಚಿಕೆ ಆಗಿದೆ ಎಂದು ಈ ರಾಜ್ಯದ ಜನರಿಗೆ ಗೊತ್ತಾಗಬೇಕು. This should be made known to the people of Karnataka. 2500 ಕೋಟಿ ರೂ. ಏನಾಯಿತು? ಇದನ್ನು ಯಾರೋ ಒಬ್ಬ ಹೊಡೆಯುವುದಕ್ಕೆ ಸಾಧ್ಯವಿಲ್ಲ. ರಾಜ್ಯದ ಸಂಪತ್ತು ಒಬ್ಬರು ಹೊಡೆಯುವುದಕ್ಕೆ ಆಗುವುದಿಲ್ಲ. ಅನೇಕ ಜನರ ಜೇಬುಗಳಿಗೆ ಹೋಗಿರಬಹುದು. ಅದು ಯಾರ್ಯಾರು ಜೇಬಿಗೆ ಹೋಗಿದೆ, 2500 ಕೋಟಿ ರೂ. ಎಲ್ಲಿ ಹೋಯಿತು? ರಾಜ್ಯದ ಬೊಕ್ಕಸಕ್ಕೆ ಅದನ್ನು ತರುವುದಕ್ಕೆ ನಿಮ್ಮ ಕೈಯಲ್ಲಿ ಏಕೆ ಆಗಲಿಲ್ಲ? ನೋಡುತ್ತಾ ನೋಡುತ್ತಾ ಏಕೆ ಬಿಟ್ಟುಬಿಟಿರಿ? ಇದು ನಿಮ್ಮ ಕಣ್ಣಿನ ಎದುರಿಗೇ ಆಗಿರುವುದು. ಅದಕ್ಕಾಗಿ ಏಳು ಚೆಕ್ಪೋಸ್ಟ್ ಇವೆ. ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು, in the month of October, ಈ ಕಾರಣಕ್ಕಾಗಿ ಇರಬಹುದು, he has transferred DC and SP of

Bellary. ಗದಗ್‌ನ ಎಸ್.ಪಿ., ಗದಗ್ ಡಿ.ಸಿ.ಸೇರಿದಂತೆ ಸುಮಾರು 67 ಅಧಿಕಾರಿಗಳನ್ನು ಟ್ರಾನ್ಸ್‌ಫರ್ ಮಾಡಿದರು. ಅವರುಗಳ ಒಂದು ತಿಂಗಳು ಇದ್ದರು. ಬೇರೆ ಅಧಿಕಾರಿಗಳು ಅಲ್ಲಿಗೆ ಬಂದರು. ಒಂದು ತಿಂಗಳಾದ ಮೇಲೆ ಯಾರು ಯಾರು ಟ್ರಾನ್ಸ್‌ಫರ್ ಆಗಿದ್ದರೋ. ಅದೇ ಡಿ.ಸಿ. ಬಸಪ್ಪ, ಅದೇ ಡಿ.ಎಫ್.ಒ. ಮುತ್ತಯ್ಯ ಮತ್ತು ಮೈನ್ಸ್ ಅಂಡ್ ಜಿಯಾಲಜಿಯಲ್ಲಿದ್ದ ಹಿಂದಿನ ಅಧಿಕಾರಿಗಳೇ, they came back to the same place. ಬೇರೆ ಕಡೆಗೂ ಅಲ್ಲ same place ಗೆ. Can we call it a good administration? Then why they are transferred? Why they were brought back? What made the Chief Minister to take a decision like this? Under whose influence? on whose pressure this has happened? ನನಗೆ ಗೊತ್ತಿರುವ ಮಟ್ಟಿಗೆ ಹೇಳಬೇಕೆಂದರೆ, ನಾನೂ ಕೂಡ ಸುಮಾರು ವರ್ಷಗಳ ಕಾಲ ಅಧಿಕಾರದಲ್ಲಿದ್ದೆ, ನಾನು 5 ಜನ ಮುಖ್ಯಮಂತ್ರಿಗಳ ಜೊತೆ ಕೆಲಸವನ್ನು ಮಾಡಿದ್ದೇನೆ, ಯಾವ ಸರ್ಕಾರದಲ್ಲಿಯೂ ಕೂಡ 67 ಜನ ಅಧಿಕಾರಿಗಳನ್ನು ಯಾರಿಗೋ ಹೆದರಿಕೊಂಡು, ಯಾರಿಗೋ ಭ್ರಷ್ಟಾಚಾರಕ್ಕೆ ಅಧಿಕಾರಿಗಳು ಸಹಾಯ ಮಾಡಲೆಂದು, ಅವರನ್ನು ಮತ್ತೆ ಅದೇ ಜಾಗಕ್ಕೆ ವರ್ಗ ಮಾಡಿದಂಥ ನಿದರ್ಶನ ಕರ್ನಾಟಕದ ಇತಿಹಾಸದಲ್ಲಿ ಯಾವಾಗಲೂ ಕೂಡ ಹಿಂದೆ ನಡೆದಿರಲಿಲ್ಲ. ಮುಖ್ಯಮಂತ್ರಿಗಳು ಹೇಳುತ್ತಾರೆ ನಮಗೆ ನಿಮ್ಮ ಸ್ಟ್ರೆಂಥ್ ಇನ್ನೂ ಹೆಚ್ಚಾಗಬೇಕು, ನಾನು ಇನ್ನೂ ಸ್ಟ್ರಾಂಗ್ ಆಗಬೇಕು ಎಂದು ಹೇಳಿದ್ದರು. ಯಡಿಯೂರಪ್ಪನವರೆ, ನಿಮ್ಮನ್ನು ಈಗ ಸ್ಟ್ರಾಂಗ್ ಎಂದು ಕರೆಯಬೇಕೋ ಅಥವಾ ವೀಕ್ ಎಂದು ಕರೆಯಬೇಕೋ ಹೇಳಿ. "ಈ ರಾಜ್ಯದ ಸಂಪತ್ತನ್ನು ಉಳಿಸಿಕೊಳ್ಳವುದಕ್ಕೆ ನನ್ನಿಂದ ಆಗಲಿಲ್ಲ, I am helpless" ಎನ್ನುವವರನ್ನು ಸ್ಟ್ರಾಂಗ್ ಎಂದು ಕರೆಯಬೇಕೋ ಅಥವಾ ವೀಕ್ ಎಂದು ಕರೆಯಬೇಕೋ ನೀವೆ ಹೇಳಿ. ಎರಡೂವರೆ ಸಾವಿರ ಕೋಟಿ ರೂಪಾಯಿಗಳ ನಮ್ಮ ರಾಜ್ಯದ ಸಂಪತ್ತಾದ ಅದಿರು ವಿದೇಶಗಳಿಗೆ ಕೊಳ್ಳೆ ಹೋಗುತ್ತಿರುವಾಗ, ಯಾರೋ ಕೆಲವೇ ಜನರ ಕೈಗೆ ಈ ಸಂಪತ್ತು ಹೋಗುತ್ತಿರುವಾಗ ಅದನ್ನು ತಡೆಗಟ್ಟುವುದಕ್ಕೆ ಅಗದೇ

ಇರುವಂಥ ಮುಖ್ಯಮಂತ್ರಿಗಳನ್ನು can we call our Chief Minister as strong Chief Minister or weak Chief Minister? This is the issue people are discussing in the state. ಚರ್ಚೆ ಮಾಡುವುದಕ್ಕೆ ನಿಮ್ಮ ಹತ್ತಿರ ಏನೂ ಮೇಟೇರಿಯಲ್ ಇಲ್ಲ. ಅದಕ್ಕೋಸ್ಕರ ಹೀಗೆ ಮಾಡುತ್ತಿದ್ದೀರಿ. ನಾವು ಚರ್ಚೆ ಮಾಡುವುದಕ್ಕೆ ತಯಾರಾಗಿದ್ದೆವು. You have no material to discuss, that is why avoiding discussion under Rule 60. ಏಕೆಂದರೆ ಡಿವಿಶನ್ ಆಗಿಬಿಟ್ಟರೆ ಕಷ್ಟ ನಿಮಗೆ. ಏಕೆಂದರೆ ಅಲ್ಲಿ ಗುಂಪುಗಳಿವೆ. ಎಲ್ಲಿ ವಿರೋಧ ಪಕ್ಷದವರ ಪರವಾಗಿ ಕೈ ಎತ್ತುಬಿಡುತ್ತಾರೋ ಏನೋ, ಸರ್ಕಾರ ಹೋಗಿಬಿಡುತ್ತದೋ ಏನೋ ಎನ್ನುವುದು ಅವರಲ್ಲಿದೆ. ಏಕೆಂದರೆ ಆ ಕಡೆಯಲ್ಲಿಯೂ ಬಹಳಷ್ಟು ಜನರು ಆತ್ಮಸಾಕ್ಷಿಯಾಗಿ ಕೆಲಸ ಮಾಡುವವರು ಇದ್ದಾರೆ. ನಮಗೆ ಬಹಳ ಜನ ಸ್ನೇಹಿತರು ಆ ಕಡೆ ಇದ್ದಾರೆ. ಅವರೇನಾದರೂ ನಮ್ಮ ಪರವಾಗಿ ಕೈ ಎತ್ತಿದರೆ ಏನಾದರೂ ಸರ್ಕಾರಕ್ಕೆ ಪ್ರಾಬ್ಲಂ ಆಗಿಬಿಟ್ಟರೆ, that is why, ರೂಲ್ 60 ರಲ್ಲಿ ಬೇಡ, ರೂಲ್ 69 ರಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಿ ಎನ್ನುತ್ತಿರುವುದು. A matter like this, very sensational, which attracted the minds of the 6 crore people in the state, ಆ ಇಶ್ಯುವನ್ನೇ ಬೇಡವೆಂದು ಹೇಳಿದರೆ ಏನು ಮಾಡುವುದು ಹೇಳಿ. ಇಡೀ ರಾಜ್ಯದ ಗಮನ ಸೆಳೆದಿರುವಂಥ ವಿಷಯವಿದು. ಇಂಥ ಇಶ್ಯು ರೂಲ್ 60 ರಲ್ಲಿ ಚರ್ಚೆಯಾಗುವುದು ಬೇಡ. ಏಕೆಂದರೆ ಈ ರೂಲ್ 60 ರಡಿಯಲ್ಲಿ ಚರ್ಚೆ ಯಾವಾಗಲೂ ನಡೆದಿಲ್ಲವೆನ್ನುತ್ತಾರೆ. ನಾನು ನಿಮಗೆ ಹಿಂದೆ ನಿಯಮ 60 ರಡಿಯಲ್ಲಿ ಚರ್ಚೆ ನಡೆದಿರುವುದು ತೋರಿಸಲೆ? ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿರುವಾಗ ಮಾನ್ಯ ರಂಗನಾಥ್‌ರವರು ಬಜೆಟ್ ಲೀಕ್ ಆಯಿತು ಎನ್ನುವ ವಿಚಾರವನ್ನು ಚರ್ಚೆಗೆ ನಿಲುವಳಿ ಸೂಚನೆಯಲ್ಲಿ ತರುತ್ತಾರೆ. He moved a Motion under Rule 60 and it was allowed. Sri.S.M.Krishna was the Speaker. It was allowed under Rule 60. ಅದೇ ರೀತಿ ಇದೇ ಬಚ್ಚೇಗೌಡರು ಮತ್ತು ಈಗ ಸದನದಲ್ಲಿ ಇಲ್ಲದ ಮಾನ್ಯ

ಸಿಧ್ಯಾರವರು ಮತ್ತು ನಿಧನರಾಗಿರುವ ಬೈರೇಗೌಡರು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಚರ್ಚೆ ಮಾಡಲು ರೆಸಲ್ಯುಶನ್ ಮೂವ್ ಅನ್ನು ರೂಲ್ 60 ರಡಿಯಲ್ಲಿ ಮಾಡುತ್ತಾರೆ. It was allowed under Rule 60. ಆಗ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಚರ್ಚೆಯಾಗುತ್ತದೆ. Sri Ramakrishna Hegde was the Chief Minister. ಬರಗಾಲದ ಬಗ್ಗೆ ಚರ್ಚೆ ಮಾಡಲು ರೂಲ್ 60 ರಡಿಯಲ್ಲಿ ನಿಲುವಳಿ ಸೂಚನೆ ಬರುತ್ತದೆ. It was discussed under Rule 60. ಇದೆಲ್ಲಾ ಇದ್ದರೂ ಕೂಡ ಈ ರೀತಿ ನಡೆದಿರುವ ಪ್ರಿಸಿಡೆಂಟೇ ಇಲ್ಲ, ಈ ನಿಯಮದಡಿಯಲ್ಲಿ ಚರ್ಚೆ ನಡೆದಿಲ್ಲವೆನ್ನುತ್ತಾರೆ. ನಾವು ಹೇಳಿರುವುದನ್ನು ರೂಲ್ 60 ರಡಿಯಲ್ಲಿ ಚರ್ಚೆ ಮಾಡುವುದಕ್ಕೆ ಏಕೆ ನಿಮಗೆ ಆಗುವುದಿಲ್ಲ? ನಾವು ಹೇಳಿರುವುದನ್ನು ರೂಲ್ 60 ರಡಿಯಲ್ಲಿ ಚರ್ಚೆ ಮಾಡುವುದಕ್ಕೆ ಏಕೆ ನಿಮಗೆ ಆಗುವುದಿಲ್ಲ? Why can't you discuss under Rule 60? ನೀವೇಕೆ ವಿರೋಧ ಮಾಡುತ್ತೀರಿ? Rule 69 ಗೆ insist ಮಾಡುತ್ತೀರಿ? ಜನಗಳಿಗೋಸ್ಕರ ನಾವು ರೂಲ್ 69 ರಡಿಯಲ್ಲಿಯೇ ಚರ್ಚೆ ಮಾಡಲು ಒಪ್ಪಿಕೊಂಡಿದ್ದೇವೆ. ಪರವಾಗಿಲ್ಲ. ಕೇವಲ ಟೆಕ್ನಿಕ್ಯಾಲಿಟಿ ಮೇಲೆ ಹೋಗಬಾರದೆಂದು ತೀರ್ಮಾನ ಮಾಡಿ ರೂಲ್ 69 ರಡಿಯಲ್ಲಿ ಚರ್ಚೆ ಮಾಡುತ್ತಿದ್ದೇವೆ. Now, there is a provision. ಇದಕ್ಕಿಂತ, ಈಗ ಎಲ್ಲ ನಾನು ಹೇಳಿದಂತಹದ್ದೇಲ್ಲವೂ ಯಾವುದೂ ಕೂಡ ಅಷ್ಟು ಸೀರಿಯಸ್ ಇಲ್ಲ. ಇಷ್ಟೊಂದು sensational ಇಲ್ಲ. This is the convention, this is the precedence, the examples we are having in this House. ಮಾನ್ಯ ಅಧ್ಯಕ್ಷರೆ, ಇಲ್ಲಿ ಮಾನ್ಯ ಲೋಕಾಯುಕ್ತರು ಅಧಿಕಾರ ದಾಹದಿಂದ ರಾಜೀನಾಮೆಯನ್ನು ಕೊಟ್ಟಿರುವ ನಿದರ್ಶನವಲ್ಲ. ಪರಮಾಧಿಕಾರ ಬೇಕು ಎಂದು ಹೇಳಿ ರಾಜೀನಾಮೆಯನ್ನು ಕೊಟ್ಟಿರುವುದಲ್ಲ. ಯಡಿಯೂರಪ್ಪನವರು ತಮ್ಮ ಹೇಳಿಕೆಯಲ್ಲಿ ಹೇಳಿದ್ದಾರೆ, ನಿನ್ನೆ ಕೂಡ ಅವರು ಮಾತನಾಡುವಾಗ ಹೇಳಿದ್ದಾರೆ. ಏನೆಂದರೆ, ಶೇಕಡ 90 ರಷ್ಟು ಅವರು ಕೇಳಿದ್ದನ್ನು ನಾವು ಕೊಟ್ಟಿದ್ದೇವೆ ಎಂದು

ಹೇಳಿದ್ದಾರೆ. ಆದರೆ ಲೋಕಾಯುಕ್ತರು ನಾನು ಕೇಳಿರುವುದರಲ್ಲಿ ಕೇವಲ ಶೇಕಡ 10 ರಷ್ಟು ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ.

ಶ್ರೀ ಬಿ ಎಸ್ ಯಡಿಯೂರಪ್ಪ(ಮುಖ್ಯಮಂತ್ರಿಗಳು): ಮಾನ್ಯ ಸಿದ್ದರಾಮಯ್ಯನವರೆ, ಒಂದು ನಿಮಿಷ ಈಲ್ಡ್ ಆಗಿ. ನಾನು ಪ್ರತಿ ಪಕ್ಷದ ನಾಯಕರಿಂದ ಏನು ನಿರೀಕ್ಷೆ ಮಾಡುತ್ತಿದ್ದೇನೆಂದರೆ, ಈಗ ಲೋಕಾಯುಕ್ತರು ಎನು ಕೇಳಿದ್ದರು? ನಾವೇನು ಕೊಟ್ಟಿದ್ದೇವೆ ಮತ್ತು ಏನು ಕೊಡಲಿಲ್ಲವೆನ್ನುವುದನ್ನು ತಾವು ಹೇಳಿದರೆ ನಮಗೆ ಉತ್ತರ ಕೊಡಲು ಸುಲಭವಾಗುತ್ತದೆ. ಬೇರೆ ನಾನು ಏನನ್ನೂ ಕೇಳುವುದಿಲ್ಲ. ಲೋಕಾಯುಕ್ತರು ನಮ್ಮ ಸರ್ಕಾರಕ್ಕೆ ಏನು ಕೇಳಿದ್ದರು? ನಾವೇನು ಕೊಟ್ಟಿದ್ದೇವೆ, ಏನು ಕೊಟ್ಟಿಲ್ಲ ಎನ್ನುವುದನ್ನು ತಾವು ಪ್ರತಿ ಪಕ್ಷದ ನಾಯಕರಾಗಿ ಹೇಳುತ್ತೀರಿ ಎಂದನು ನಾನು ನಿರೀಕ್ಷೆ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ: ನಾನು ಇದುವರೆಗೂ ಹೇಳಿರುವುದನ್ನು ತಾನು ನಿರೀಕ್ಷೆ ಮಾಡಿರಲಿಲ್ಲವೆ ಸ್ವಾಮಿ? ಇಷ್ಟು ಹೊತ್ತು ನಾನು ಹೇಳಿದ್ದನ್ನು ನೀವು ಪರೀಕ್ಷೆ ಮಾಡಿರಲಿಲ್ಲವೆ? ಎರಡೂವರೆ ಸಾವಿರ ಕೋಟಿ ರೂಪಾಯಿದ್ದನ್ನು ತಾವು ನಿರೀಕ್ಷೆ ಮಾಡಿರಲಿಲ್ಲವೆ? ಮಾನ್ಯ ಅಧ್ಯಕ್ಷರೆ, ಇವರು 90 ಪರ್ಸೆಂಟ್ ಲೋಕಾಯುಕ್ತರು ಕೇಳಿದ್ದನ್ನು ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಲೋಕಾಯುಕ್ತರು ಏನು ಹೇಳುತ್ತಾರೆಂದರೆ, ನಾನು 30 ಪರ್ಸೆಂಟ್ Special allowance ಕೋಟಿ, like Andhra Pradesh and Orissa, ಕೊಡಿ ಎಂದು ಕೇಳಿದ್ದೆ. ಆದರೆ 15% ಕೊಟ್ಟರು ಎಂದಿದ್ದಾರೆ. ಇದು ಸರಿಯೆ? ನೋಡಿ ಈಗ ಅವರು ಇದಕ್ಕೆ ಮಾತನಾಡುವುದೇ ಇಲ್ಲ. ಸುಮ್ಮನೆ ಕುಳಿತುಕೊಂಡು ಬಿಟ್ಟಿದ್ದಾರೆ.

ಶ್ರೀ ಬಿ ಎಸ್ ಯಡಿಯೂರಪ್ಪ: ಉತ್ತರ ಕೊಡುವಾಗ ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ: 15 ಪರ್ಸೆಂಟ್ ಕೊಡುತ್ತೇನೆ ಎಂದಿದ್ದಾರೆ. ಮೋನ್ನೆ ಬೆಸ್ಕಾಂನಲ್ಲಿ, ಬಿಡಬ್ಲ್ಯೂ ಎಸ್ಎಸ್ಬಿ ಯಲ್ಲಿ Executive Engineer ಅವರನ್ನು ಸಸ್ಪೆಂಡ್ ಮಾಡಿದ್ದಾರೆ ನರ್ಮ್ಸ್ನಲ್ಲಿ. ಅವರನ್ನು reinstate ಮಾಡಬೇಡಿ ಎಂದು ಹೇಳಿದ್ದೆ. ಅದರೂ ಅವರನ್ನು reinstate ಮಾಡಿದರು. ನನಗೂ ಕೂಡ ಒಂದು ಮಾತನ್ನು ಹೇಳಲಿಲ್ಲ. ನಾನು ಹೇಳಿದ್ದೆ ಅವರಿಗೆ.

ಅವರನ್ನು reinstate ಮಾಡುವುದಿದ್ದರೆ ನನಗೆ ಸ್ವಲ್ಪ ತಿಳಿಸಿ ಎಂದು ಹೇಳಿದ್ದರಂತೆ. ಸರ್ಕಾರದವರಾದ ತಾವು ಅವರಿಗೆ ಈ ಬಗ್ಗೆ ತಿಳಿಸಿದಿರೆ? ಇದನ್ನು ಅವರು ಕೇಳಿದ್ದರು. ಇದನ್ನು ನಾವು ಎಷ್ಟು ಪರ್ಸೆಂಟ್ ಎಂದು ಲೆಕ್ಕ ಹಾಕಿಕೊಳ್ಳುವುದು? ಉಪ ಲೋಕಾಯುಕ್ತರನ್ನು ನೇಮಕ ಮಾಡಿ ಎಂದು ಕೇಳಿದ್ದೆ ನೇಮಕ ಮಾಡಿದ್ದಾರೆಯೆ? ನಾನು ಉಪಲೋಕಾಯುಕ್ತರನ್ನು ನೇಮಕ ಮಾಡಿ ಎಂದು ಹೇಳಿದ್ದೆ, ಮಾನ್ಯ ಮುಖ್ಯಮಂತ್ರಿಗಳನ್ನು request ಮಾಡಿಕೊಂಡಿದ್ದೆ ನೇಮಕ ಮಾಡಿದ್ದಾರ? ಹಾಗಾದರೆ ಇದು ಎಷ್ಟು ಪರ್ಸೆಂಟ್ ಒಳಗಡೆ ಬರುತ್ತದೆ? ಉಪ ಲೋಕಾಯುಕ್ತರನ್ನು ನೇಮಕ ಮಾಡಿ ಎಂದು ಮೊನ್ನೆ ಕೂಡ ಮೇ ತಿಂಗಳಿನಲ್ಲಿ ನಾನು ಒಂದು ಪತ್ರ ಬರೆದೆ. ನಾನು Leader of the Opposition. ಆದರೆ ಅದಕ್ಕೆ ಒಂದು ಉತ್ತರ ಇಲ್ಲ, endorsement ಕೂಡ ಇಲ್ಲ, not even endorsement. ಉತ್ತರ ಕೊಡುವುದು ಹೋದರೂ ಹೋಗಲಿ, ಆ ಪತ್ರ receive ಮಾಡಿಕೊಂಡಿದ್ದೇನೆಂದು ಬರೆಯಲಿಲ್ಲ. ಆದರೂ ಸಿದ್ಧರಾಮಯ್ಯ ಸಭೆಗೆ ಬರಲಿಲ್ಲ, ನನಗೆ ಅಳು ಬರುತ್ತದೆ ಎಂದು ಹೇಳುವುದು. ನಾನು ಏನು ತಪ್ಪು ಮಾಡಿದ್ದೆ? ಅಲ್ಲಿ ಅವರು ಅತ್ತಿದ್ದು ನಮಗೋಸ್ಕರ ಅಲ್ಲ, ಏಕೆಂದರೆ ಅದು ಅಳುವ ಸಮಾವೇಶವಲ್ಲ. ಅದು ಬಹಳ ಖುಷಿಯಾಗಿ ಬಹಳ ರೋಷದಿಂದ ಮಾತನಾಡುವಂತಹ ಸಮಾವೇಶ. ಹೌದಾ ಶ್ರೀರಾಮುಲು, ಶ್ರೀರಾಮುಲು ಅವರಿಗೆ ಗೊತ್ತಿದೆ. ಅದು ರೋಷದಿಂದ ಮಾತನಾಡುವ ಸಮಾವೇಶ ಅಲ್ಲವೇ ಶ್ರೀರಾಮುಲು. ನೀವು ಆ ಸಮಾವೇಶಕ್ಕೆ ಹೋಗಿರಲಿಲ್ಲವೇ? ಅವರು ಅಂದು ನನ್ನ ಹೆಸರು ಹೇಳಿಕೊಂಡು ಅತ್ತಿದ್ದು ಸರಿಯೇ ಎಂದು ಹೇಳಿ ನೋಡೋಣ. ಅವತ್ತು ಸಂತೋಷದಲ್ಲಿ 60 ವರ್ಷಗಳಲ್ಲಿ ಮಾಡದಿರುವಂತಹ ಸಾಧನೆಯನ್ನು ಈ ಯಡಿಯೂರಪ್ಪ ಮಾಡಿದ್ದಾರೆ ಎಂದು ಹೇಳುತ್ತಾ ಹೇಳುತ್ತಾ ಅತ್ತುಬಿಟ್ಟರೆ ನಾವು ಏನೆಂದು ತಿಳಿದುಕೊಳ್ಳಬೇಕು. ಮಾನ್ಯ ಅಧ್ಯಕ್ಷರೇ, ಇದಕ್ಕೆ ಏನು ಹೇಳುವುದು. ಅದಕ್ಕೆ ಅದು ಆಳುವ occasion ಅಲ್ಲ, ಅವರು ಏಕೆ ಅತ್ತರೋ ಗೊತ್ತಿಲ್ಲ, ನಾನು ಇನ್ನೂ Probe ಮಾಡಬೆಕಾಗಿದೆ ಎಂದು ಹೇಳಿದೆ.

ಅವರು ನನಗೋಸ್ಕರ ಅಂತೂ ಅತ್ತಿಲ್ಲ. ಏಕೆಂದರೆ ನಾನು ಉಪ ಲೋಕಾಯುಕ್ತರನ್ನು ಮಾಡಿ ಎಂದು ಪತ್ರ ಬರೆದರೆ ಅದಕ್ಕೆ ಇವರು ಒಂದು endorsement ಕೂಡ ಕಳುಹಿಸಲಿಲ್ಲ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರಾದ ಕೆ.ಜಿ.ಬೋಪಯ್ಯನವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಸಿದ್ದರಾಮಯ್ಯ: ಅದು ಅಷ್ಟೇ ಅಲ್ಲ, ವಿರೋಧ ಪಕ್ಷದವರ co-operation ಇಲ್ಲವೆಂದು ಹೇಳುವುದು. ಆಶ್ರಯ ಯೋಜನೆಗೆ ಸಂಬಂಧಪಟ್ಟಂತೆ ಹೇಳುವುದಾದರೆ ಎಷ್ಟು ಕಡೆ ಅಡಿಗಲ್ಲು ಹಾಕಿದ್ದೀರಿ? Any invitation? ಒಂದು Pillar ಮೇಲೆ ಅದರೂ ನನ್ನ ಹೆಸರು ಇದೆಯೇ? ಅವರು ನನ್ನ ಹೆಸರನ್ನು ಯಾವುದರಲ್ಲಿ ಯಾದರೂ ಒಂದೇ ಒಂದು ಕಡೆ ತೋರಿಸಿಬಿಡಲಿ. ಎಲ್ಲೂ ಇಲ್ಲ. ಹಂಪಿ ಉತ್ಸವದಲ್ಲಿ ಶ್ರೀ ಕೃಷ್ಣದೇವರಾಯನ 500ನೇ ವರ್ಷದ ಪಟ್ಟಾಭಿಷೇಕ ಎಂದು ಮಾಡಿದರಲ್ಲ, ಅದು ಸರ್ಕಾರದ ಸಮಾರಂಭವಾಗಿದ್ದು ಅಲ್ಲಿ ನನ್ನ ಹೆಸರು ಇತ್ತೇ ಎನ್ನುವುದನ್ನು ಶ್ರೀ ರಾಮುಲುರವರೇ ಹೇಳಿ. ಬನ್ನಿ ಎಂದರೂ ಬರುವುದಿಲ್ಲವೆಂದು ಹೇಳುವುದು. ನಾವು ಏನು ಮಾಡುವುದಕ್ಕೆ ಬರಬೇಕು? ಅವರು ನಮ್ಮನ್ನು ಕರೆಯದೆ ಬರಬೇಕೇ? ಹಂಪಿ ಉತ್ಸವ, it is a Government function. ಸರ್ಕಾರದ ಹಣ 43 ಕೋಟಿ ರೂಪಾಯಿ ಖರ್ಚು ಮಾಡಿದಂತಹ function. ಅದಕ್ಕೆ ನನಗೆ invitation ಇಲ್ಲ. ಇಲ್ಲಿ ಸಾಧನಾ ಸಮಾವೇಶದಲ್ಲಿ ನನ್ನ ಹೆಸರು ಹಾಕಿಬಿಟ್ಟು ಸಿದ್ಧರಾಮಯ್ಯ ಬರಲಿಲ್ಲವೆಂದು ಅತ್ತರೆ, could anybody believe this? Nobody on the earth will believe this? ಯಡಿಯೂರಪ್ಪನವರಿಗೆ ಹೇಗೆ ದು:ಖವಾಗುತ್ತದೆ? ಅದು ದು:ಖ ಅಲ್ಲ, 2,500 ಕೋಟಿ ರೂಪಾಯಿಯನ್ನು ಜೊತೆಯಲ್ಲಿ ಇದ್ದುಕೊಂಡು ನುಂಗಿ ಬಿಟ್ಟು ತೊಂದರೆ ಕೊಡುತ್ತಿದ್ದಾರಲ್ಲ ಅದಕ್ಕೆ ಅವರಿಗೆ ದು:ಖ. ಪಾಪ ಅವರಿಗೆ ಹಿಂಸೆ ಕೊಡುತ್ತಿದ್ದಾರಲ್ಲ ಅದಕ್ಕೆ ದು:ಖ ನನಗೆ ಹೆಚ್ಚಾಗಿ, these tow portfolios Forest and Mines & Geology are coming under

Hon'ble Chief Minister. Without the permit issued by the Forest and without the permit issued by the Mines and Geology department, not a single KG of Iron-ore can be transported from any place to any place. Then whether all those Deputy Director of Mines & Geology in Bellary. DFO in Bellary, SP in Bellary, DC in Bellary have been punished? On the other hand, they have been brought back to their glorious places. Because, 2,500 ಕೋಟಿ ರೂಪಾಯಿ ಅದಿರು ಹೋಗುವುದಕ್ಕೆ ಬಿಟ್ಟಿದ್ದಾರೆ. ಅವರು ಯಾರ ಹತ್ತಿರ ಕೆಲಸ ಮಾಡುವವರು? ಅವರು Chief Minister ಕೆಳಗಡೆ ಕೆಲಸ ಮಾಡುತ್ತಿರುವವರು. Check-Post ಕೂಡ ಅವರಿಗೆ ಬರುತ್ತದೆ and Commercial Tax check post coming under whom? Again coming under the Hon'ble Chief Minister. In such a case, ನಾನು ಯಾರ ಮೇಲೆ responsibility fix ಮಾಡಬೇಕು? ಯಾರನ್ನು ಜವಾಬ್ದಾರರನ್ನಾಗಿ ಮಾಡಬೇಕು? ಶ್ರೀ ಜಗದೀಶ್ ಶೆಟ್ಟರ್ ಮೇಲೆ ಜವಾಬ್ದಾರರನ್ನಾಗಿ ಮಾಡಬೇಕೆ? ಇಲ್ಲ. ಶ್ರೀ ಕಾರಜೋಳರವರ ಮೇಲೆ ಇಲ್ಲ, ಶ್ರೀ ರಾಮಚಂದ್ರ ಗೌಡರವರ ಮೇಲೆ ಇಲ್ಲ, ಶ್ರೀರಾಮುಲು ಮೇಲೆ ಇಲ್ಲ. It is solely the Hon'be Chief Minister Mr.Yeddyurappa, nobody else. 2,500 ಕೋಟಿ ರೂಪಾಯಿ ಬಗ್ಗೆ ನಿನ್ನೆ ಅವರೇ ಹೇಳಿದ್ದಾರೆ, ಅವರು ಇಲ್ಲವೆಂದು ಉತ್ತರದಲ್ಲಿ ಕೂಡ ಹೇಳುವುದಕ್ಕೆ ಬರುವುದಿಲ್ಲ. ಅವರು ಆವೇಶದಲ್ಲಿ ಮತ್ತು ಕೋಪದಲ್ಲಿ 2007-08ರಲ್ಲಿ 2,500 ಕೋಟಿ ರೂಪಾಯಿ ಹೋಗಿದೆ ಎಂದು ಹೇಳಿಬಿಟ್ಟರು. ಆಗ ಯಾರಾದರೂ ಮುಖ್ಯಮಂತ್ರಿ ಇರಲಿ. 2000-01ರಲ್ಲಿ, 2002-03, 2003-04ರಲ್ಲಿ 2007-08ರಲ್ಲಿ, 2008-09ರಲ್ಲಿ ಯಾರಾದರೂ ಮುಖ್ಯಮಂತ್ರಿ ಇರಲಿ. ಇವರು 2006-07ರಲ್ಲಿ, 2007-08ರಲ್ಲಿ ಹಣಕಾಸಿನ ಮಂತ್ರಿಯಾಗಿದ್ದರು. ಈಗ 2009-10ರಲ್ಲಿ ಇವರೇ ಮುಖ್ಯಮಂತ್ರಿಯಾಗಿದ್ದರು. 2010-11ರಲ್ಲಿ ಕೂಡ ಇವರೇ ಮುಖ್ಯ

ಮಂತ್ರಿಯಾಗಿದ್ದಾರೆ. ಇನ್ನು ಎರಡು ವರ್ಷ ನೀವೇ ಇರಿ, ನಮ್ಮದೇನೂ ತಕರಾರಿಲ್ಲ. ಆದರೆ 2,500 ಕೋಟಿ ರೂಪಾಯಿಯ ಈ ರಾಜ್ಯದ ಸಂಪತ್ತು, ಜನರ ಸಂಪತ್ತು, ಜನರ ಸಂಪತ್ತು ಕೊಳ್ಳೆ ಹೊಡೆದುಕೊಂಡು ಹೋಗಿದೆಯಲ್ಲ. ಅದನ್ನು ಯಾರ ಮೇಲೆ ಜವಾಬ್ದಾರಿಯನ್ನು ನಿಗದಿ ಮಾಡುವುದು? This House has to take a decision. ನನ್ನ ಪ್ರಕಾರ, It is the Chief Minister alone who is responsible for this huge loss to the exchequer of Karnataka, nobody elsi. ಇದರ ಜವಾಬ್ದಾರಿ ಹೊರಲೇಬೇಕು.

4–50 ಪಿ.ಎಂ.

ಇದನ್ನು ತಡೆಗಟ್ಟುವುದಕ್ಕೆ ಆಗಲಿಲ್ಲವೆಂದು ಹೇಳಿ ನೊಂದು ಲೋಕಾಯುಕ್ತರು ರಾಜೀನಾಮೆ ಕೊಟ್ಟಿದ್ದಾರೆ. ಅವರು ಇಲ್ಲಿ ಇದ್ದುಕೊಂಡು ನನ್ನ ಕೈಯಲ್ಲಿ ತಡೆಗಟ್ಟುವುದಕ್ಕೆ ಆಗುತ್ತಿಲ್ಲವಲ್ಲ, ನನಗೆ ಈ ಸರ್ಕಾರದಿಂದ Co-operation ಇಲ್ಲ, ತಡೆಯುವುದಕ್ಕೂ ಆಗುತ್ತಿಲ್ಲ, ನಿಲ್ಲಿಸುವುದಕ್ಕೂ ಆಗುತ್ತಿಲ್ಲ, ಅಸಹಾಯಕನಾಗಿ ಹೋಗಿದ್ದೇನೆ ಎಂದು ರಾಜೀನಾಮೆ ಕೊಟ್ಟರು. ಏನಾಯಿತು? ಆಮೇಲೆ ಅವರು ಏನು ಹೇಳಿದ್ದಾರೆ? ನಾನು ಕೊಟ್ಟ ವರದಿಗಳಿಗೆ ಒಂದಕ್ಕೂ ಕೂಡ ಕವಡೆ ಕಾಸಿನ ಕಿಮ್ಮತ್ತೂ ಕೊಟ್ಟಿಲ್ಲ. ಇದನ್ನು ಲೋಕಾಯುಕ್ತರಿಗೆ ವಹಿಸಿದ್ದು ಯಾವಾಗ? ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಯವರು ಇದ್ದಾಗ ಲೋಕಾಯುಕ್ತರಿಗೆ ವಹಿಸಿದರು. ಅದರಲ್ಲೂ ಜನಾರ್ಧನ ರೆಡ್ಡಿಯವರು 150 ಕೋಟಿ ರೂಪಾಯಿ ಭ್ರಷ್ಟಾಚಾರದ ಆರೋಪ ಮಾಡಿದ ಮೇಲೆ ಅದನ್ನು ಲೋಕಾಯುಕ್ತಕ್ಕೆ ವಹಿಸಿದರು. ಅವರ ಅಧಿಕಾರಿ ಶ್ರೀ ಯು.ವಿ.ಸಿಂಗ್‌ರವರು ಬಳ್ಳಾರಿ, ಸಂಡೂರು, ಹೊಸಪೇಟೆ, ಈ ಎಲ್ಲಾ ಸ್ಥಳಗಳನ್ನು visit ಮಾಡಿ, report ಅನ್ನು ತಯಾರು ಮಾಡಿ, the first report was submitted to the Government in the month of December 2008. The Lokayukta Act sayss within 3 months from the submission of report by the Lokayukta action has to be taken by the

Government. Has it been done? Report ಕೊಟ್ಟ 90 ದಿವಸಗಳಲ್ಲಿ action ತೆಗೆದುಕೊಳ್ಳಬೇಕೆಂದು ಲೋಕಾಯುಕ್ತರ Act ಹೇಳುತ್ತದೆ. This is under Section 12(5) of the Lokayukta Act, 1986. ಡಿಸೆಂಬರ್ ತಿಂಗಳಲ್ಲಿ the compliance of the report, action taken report ಅನ್ನು ಕೊಟ್ಟರು. When it was taken? Not within the prescribed time in the Act and according to Hon'ble Lokayukta, ಅವರೇ ಬಳಸಿದಂಥ ಪದ, it is an action taken rport, ಒಂದೇ ಒಂದು report, action said to have been taken. He called it action to be taken. That is the action taken report. ಸರ್ಕಾರ ಮಾಡಿದ್ದು according to Lokayukta it is action to be taken. That means to say, ನಾವು ಏನೇನು ಶಿಫಾರಸ್ಸುಗಳನ್ನು ಮಾಡಿದ್ದೇವು, ಆ ಯಾವ ಶಿಫಾರಸ್ಸುಗಳ ಮೇಲೂ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ. That is why he was hurt. ಇವರಿಗೆ ಪರಮಾಧಿಕಾರ ಕೊಡಲಿಲ್ಲವೆನ್ನುವುದಲ್ಲ. ಮಾನ್ಯ ಯಡಿಯೂರಪ್ಪನವರು ನಿನ್ನೆ ದಿವಸ ಮಾತನಾಡುವಾಗ ಮಾನ್ಯ ರಾಮಕೃಷ್ಣ ಹೆಗಡೆಯವರು 1984ರಲ್ಲಿ ಮುಖ್ಯಮಂತ್ರಿಗಳಾಗಿದ್ದಾಗ ಲೋಕಾಯುಕ್ತ ಬಿಲ್ ತರಬೇಕೆಂಬ ಕಲ್ಪನೆ, ಚಿಂತನೆ ಬಂದಿದ್ದು. Of course, then I was not a Minister. ನಾನು December end 1984ರಲ್ಲಿ I mean, August end ನಲ್ಲಿ ಸ್ವಲ್ಪ ದಿವಸ ಮಂತ್ರಿ ಆದೆ, ಮತ್ತೆ ಒಂದು ವರ್ಷಕ್ಕೆ ಪುನ: ಹೋದೆ, ಪುನ: ಲೇಟಾಗಿ ಬಂದೆ. It is a different thing. ಆದರೆ ನೀವು ಹೇಳುವುದು ನಿಜ. ಲೋಕಾಯುಕ್ತ Actನಲ್ಲಿ including Chief Minister, all Ministers, MLAs, Chairman, Speaker, Chairman of the Council ಎಲ್ಲರ ಮೇಲೂ enquiry ಮಾಡುವ ಅಧಿಕಾರವಿದೆ and subsequently Class-I Officers, Ministers, MLAs and others. On Elected

representatives it was withdrawn. ಅದು ಆದ ಮೇಲೆ ಯಾವ ಲೋಕಾಯುಕ್ತರು ಇದುವರೆಗೂ except Justice Venkatachla ಅವರನ್ನು ಬಿಟ್ಟರೆ ಇವರ ಹಿಂದೆ ಇದ್ದವರು ಯಾರು ಕೂಡ ನಮಗೆ ಅಧಿಕಾರ ಕೊಡಿಯೆಂದು ಕೇಳಿದವರಿಲ್ಲ. That was the situation prevailing during that period. ಆಗ ಈ ರೀತಿ ಭ್ರಷ್ಟಚಾರ magnitude ನಲ್ಲಿತ್ತಾ? ಇದು ಯಾವಾಗ ಶುರುವಾದದ್ದು ಎಂದರೆ, mining mafia and land mafia ಪ್ರಾರಂಭವಾದ ಮೇಲೆ ಆಗಿದ್ದು, ಅಲ್ಲಿಯವರೆಗೂ ರಾಜ್ಯದಲ್ಲಿ ಭ್ರಷ್ಟಚಾರ ಎಲ್ಲಿತ್ತು? ಅದು ಬಹಳ ಹೆಚ್ಚು ಎಂದರೆ excise lobby ಅಷ್ಟೆ ಇತ್ತು. ಇಲ್ಲಿ ಮಾನ್ಯ ಅಬಕಾರಿ ಸಚಿವರು ಇಲ್ಲ. ಇವರು ರಾತ್ರಿ ಹೊತ್ತು ವಿಸ್ಕಿ ಕುಡಿಸುತ್ತೇವೆಂದು ಹೇಳುತ್ತಿದ್ದರು. ಅವರು ಇಲ್ಲಿ ಇಲ್ಲ ಹೊರಟು ಹೋಗಿದ್ದಾರೆ. ನನಗೆ ಗೊತ್ತಿರುವ ಮಟ್ಟಿಗೆ excise lobby ಹೆಚ್ಚಿಗೆ ಇತ್ತು. ಇದು ಬಿಟ್ಟರೆ education lobby ಇತ್ತು. These are the two lobbies that were working at a time, ಈಗ mining mafia and land mafia. ಈ ಮಾಫಿಯಗಳು ಆಗ ಇತ್ತಾ? ವರ್ಗಾವಣೆ ಲಾಬಿ ಎಲ್ಲಾ ಕಾಲದಲ್ಲೂ ಇದೆ. ಮಾನ್ಯ ಯಡಿಯೂರಪ್ಪನವರ ಕಾಲದಲ್ಲಿ ಸ್ವಲ್ಪ ಜಾಸ್ತಿಯಾಗಿದೆ ಅಷ್ಟೆ.

ಒಬ್ಬ ಮಾನ್ಯ ಸದಸ್ಯರು: ಕಡಿಮೆ ಆಗಿದೆ.

ಶ್ರೀ ಸಿದ್ದರಾಮಯ್ಯ: ಕಡಿಮೆ ಆಗಿದೆಯಾ? ಅಯಿತು, ಬೆನ್ನು ತಟ್ಟಿಕೊಳ್ಳಿ. ಈ ಬಗ್ಗೆ ಅಂಕಿ-ಅಂಶಗಳು ಏನು ಹೇಳುತ್ತವೆ? ಇದು ಕಡಿಮೆ ಆಗಿದೆಯೋ, ಹೆಚ್ಚು ಆಗಿದೆಯೋ? ನನಗೆ ಗೊತ್ತಿರುವ ಮಟ್ಟಿಗೆ ಇಡೀ ವರ್ಷ ವರ್ಗಾವಣೆಗಳು ನಡೆಯುತ್ತಲೇ ಇರುತ್ತವೆ. ನಾವು ಅಧಿಕಾರದಲ್ಲಿದ್ದಾಗ ಎಷ್ಟು ಆಗಿದೆಯೆಂಬುದನ್ನು ನೋಡಿ, ಕಳೆದ ಎರಡು ವರ್ಷಗಳಲ್ಲಿ ಎಷ್ಟು ಆಗಿದೆಯೆಂಬುದನ್ನು ಕಡತ ತೆಗದು ನೋಡಿ.

ಶ್ರೀ ಸಿದ್ದುಸವದಿ: ನಿಮ್ಮ ಹತ್ತಿರವೇ ಇದೆಯಲ್ಲಾ.

ಶ್ರೀ ಸಿದ್ದರಾಮಯ್ಯ: ಅದೆಲ್ಲಾ ಸರ್ಕಾರದ ಹತ್ತಿರ ಇದೆ, ನನ್ನ ಹತ್ತಿರ ಇಲ್ಲ. ನಿಮಗೆ ಸಿ.ಎಂ. ಹೇಳಿದ್ದಾರೆ, ನೀವು ಆಗಾಗ ಎದ್ದು ಮಾತನಾಡುತ್ತಿರಲ್ಲಾ ಅದಕ್ಕೆ ಇರಲಿ ಎಂದು ಆ ರೀತಿ information ಕೊಟ್ಟು ಬಿಟ್ಟಿದ್ದಾರೆ. Don't believe it. ನೀವು ಮಧ್ಯೆ ಎದ್ದು ನಿಲ್ಲುತ್ತಿರಲ್ಲಾ ಅದಕ್ಕೆ ಇರಲಿ ಎಂದು ನಿಮಗೆ ಅಂಕಿ-ಅಂಶಗಳನ್ನು ಕೊಟ್ಟಿದ್ದಾರೆ, but it is not true. ಮಾನ್ಯ ಅಧ್ಯಕ್ಷರೆ, ನನಗೆ ಗಂಟಲು ನೋವಾಗುತ್ತಿದೆ. ನಾನು ನಾಳೆ I will continue.

ಶ್ರೀ ಬಿಎಸ್ ಯಡಿಯೂರಪ್ಪ: ಇವತ್ತೆ ಮಾತನಾಡಿ ಮುಗಿಸಿ.

ಶ್ರೀ ಸಿದ್ದರಾಮಯ್ಯ: ತಾವು ನಿನ್ನೆ ಮೂರು ದಿವಸಗಳ ಚರ್ಚೆ ಮಾಡೋಣವೆಂದು ಹೇಳಿ, ಈಗ ಮುಗಿಸಿ ಎಂದು ಹೇಳುತ್ತಿದ್ದೀರಿ. ನನಗೆ throat infection ಆಗಿದೆ, ನಾಳೆ ಮಾತನಾಡುತ್ತೇನೆ.

ಅಧ್ಯಕ್ಷರು: ಆಯಿತು, ಈಗ ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳೋಣ.

7. ಗಮನ ಸೆಳೆಯುವ ಸೂಚನೆ:

ಅ) ವಿಷಯ: ಸಬ್‌ಮಿಷನ್ ಯೋಜನೆ ಚಾಮರಾಜನಗರ ಹಾಗೂ ಗುಂಡ್ಲುಪೇಟೆ ತಾಲ್ಲೂಕಿನ ಕೆಲವು ಗ್ರಾಮಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವ ಬಗ್ಗೆ.

ಶ್ರೀ ಹೆಚ್ ಎಸ್ ಮಹದೇವಪ್ರಸಾದ್(ಗುಂಡ್ಲುಪೇಟೆ): ಮಾನ್ಯ ಅಧ್ಯಕ್ಷರೆ, ಚಾಮರಾಜನಗರ ಹಾಗೂ ಗುಂಡ್ಲುಪೇಟೆ ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಿಗೆ ಶಾಶ್ವತ ಕುಡಿಯುವ ನೀರಿನ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜಗದೀಶ್‌ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ಚಾಮರಾಜನಗರ ತಾಲ್ಲೂಕಿನ 166 ಗ್ರಾಮಗಳಿಗೆ ಶಾಶ್ವತ ಕುಡಿಯುವ ನೀರು ಸರಬರಾಜು ಮಾಡುವ ರೂ.60.95 ಕೋಟಿ ಅಂದಾಜಿನ ಯೋಜನೆಗೆ ಹಾಗೂ ಗುಂಡ್ಲುಪೇಟೆ ತಾಲ್ಲೂಕಿನ 131 ಗ್ರಾಮಗಳಿಗೆ ಶಾಶ್ವತ ಕುಡಿಯುವ ನೀರು ಸರಬರಾಜು ಮಾಡುವ ರೂ.42.00 ಕೋಟಿ